

## ॥ ಅಥ ಶ್ರೀ ಸಾಯಿ ಸಚ್ಚರಿತೆ ॥

## ಅಧ್ಯಾಯ ಮುವತ್ತಾಮೂರು

ಶ್ರೀ ಗಣೇಶಾಯ ನಮಃ ॥ ಶ್ರೀ ಸರಸ್ವತ್ಯೈ ನಮಃ ॥
ಶ್ರೀ ಗುರುಭ್ಯೋ ನಮಃ ॥ ಶ್ರೀ ಕುಲದೇವತಾಯೈ ನಮಃ ॥
ಶ್ರೀ ಸೀತಾರಾಮಚಂದ್ರಾಭ್ಯಾಂ ನಮಃ ॥ ಶ್ರೀ ಸದ್ಗುರು ಸಾಯಿನಾಥಾಯ ನಮಃ ॥

ಇನ್ನು ನಮಿಸುತ ಸಂತ ಸಜ್ಜನ । ಆಗಲು ಅವರ ಕೃಪಾವಲೋಕನ ।
ತತ್ಕಾಲದಲಿ ಪಾತಕಪರ್ವತ ದಹನ । ಕಲಿಮಲಕ್ಷಾಲನವೂ ಆಗುವದು ॥ 1

ಉಪಕಾರಗಳ ರಾಶಿ ಅವರದು । ಜನ್ಮಜನ್ಮಾಂತರ ಕಳೆದರೂ ತೀರದು ।
ಅವರು ನಿಜ ಮಾತನಾಡಿದ್ದು । ಅವಿನಾಶಿ ಮತ್ತು ಸುಖದಾಯಕ ॥ 2

ಇದು ತನ್ನದು ಇದು ಪರರದು । ಅವರ ಚಿತ್ತಕ್ಕೇ ಬಾರದಿದು ।
ಭೇದಭಾವದಿಂದ ಕೂಡಿದ ವಿಚಾರವದು । ಅವರ ಮನದಲ್ಲೇ ಮೂಡದು ॥ 3

ಹಿಂದಿನಧ್ಯಾಯದಲಾಯಿತು ಶ್ರವಣ । ಗುರುಗರಿಮೆಯ ಬಗ್ಗೆ ನಿರೂಪಣ ।
ಇನ್ನು ಈ ಅಧ್ಯಾಯದಲಿ ಶ್ರೋತೃ ಗಣ । ಕೇಳಿರಿ ಉದಿಯ ಮಹಿಮೆಯನ ॥ 4

ಕೇಳಿ ಕೇಳಿ ದಕ್ಷಿಣೆ ತೆಗೆದುಕೊಳ್ಳುವರು । ದೀನದುರ್ಬಲರಿಗೆ ದಾನ ಮಾಡುವರು ।
ಉಳಿದದ್ದರಲಿ ಉರುವಲ ಕೊಂಡುಕೊಳ್ಳುವರು । ಗುಡ್ಡೆಯೊಟ್ಟುವರು ಕಾಷ್ಠದ್ದು ॥ 5

ಆ ಒಣಗಿದ ಕಾಷ್ಠದಿ । ಎದುರಿಗಿದ್ದ ಧುನಿಯಲಿ ಹೋಮ ಮಾಡಿ ।
ಅದರಿಂದ ತಯಾರಾದ ಸಾಕಷ್ಟು ಬೂದಿ । ಉದಿಯೆಂದು ಭಕ್ತರಿಗೆ ಕೊಡುವರು ॥ 6

ಶಿರಡಿಯಿಂದ ತಿರುಗಿ ಊರಿಗೆ ಹೊರಟಾಗ । ಬಾಬಾರ ಹತ್ತಿರ ಅನುಜ್ಞೆ ಬೇಡಿದಾಗ ।
ಉದಿಕೊಡುವ ಪರಿಪಾಠವಿದ್ದಿತಾಗ । ಎಲ್ಲ ಭಕ್ತರಿಗೂ ಇದು ಗೊತ್ತು ॥ 7

ಬಹುಶಃ ಉದಿ ತನ್ನಿರೆಂದು । ಹೇಳಿದಾಗ ನಿಜವಾದ ಆಜ್ಞೆ ದೊರೆಯಿತೆಂದು ।
ಚಿತ್ತದಲಿ ಎಲ್ಲರೂ ಹರುಷಗೊಂಡು । ಮರಳಿ ತಮ್ಮೂರಿಗೆ ಹೋಗುವರು ॥ 8

ಅಂತೇಯೇ ಶಿರಡಿಯಲಿ ವಾಸ್ತವವಿದ್ದವರಿಗೆ । ಮಧ್ಯಾಹ್ನ ಮತ್ತು ಸಾಯಂಕಾಲ ಬೆಳಿಗ್ಗೆ ।
ಬಾಬಾ ಯಾರಿಗೂ ಉದಿಯ ಕೊಡದೇ ಹಾಗೆ । ಬರಿಗೈಯಿಂದ ಕಳುಸುತ್ತಿದ್ದರು ॥ 9

ಇದು ಇತ್ತು ನಿತ್ಯದ ಕ್ರಮ । ಆದರೆ ಆ ಉದಿಯದೇನು ಗುಣಧರ್ಮ ।
ಮಶೀದಿಯಲೇಕೆ ಧುನಿ ಒಂದೇ ಸಮ । ಏತಕೆ ಈ ಉಪಕ್ರಮ ದಿನ ದಿನವೂ ॥ 10

ವಿಭೂತಿ ದಾನದಲಿರುವ ಮನೋಗತವು । ಈ ದೃಶ್ಯ ವಿಶ್ವಾಂತರ್ಗತವೆಲ್ಲವೂ ।
ಇದೆಲ್ಲ ಬರೀ ಬೂದಿ ಎಂಬ ತಿಳಿವು । ಎಲ್ಲರಿಗೂ ಬರಲೆಂಬ ಸೂಚನೆ ॥ 11

ಕಾಷ್ಠವೇ ಈ ದೇಹ ಪಂಚಭೂತಾತ್ಮಕವಾದದು । ಭೋಗ ಭೋಗಿಸಲೆಂದೇಭೂಮಿಗೆ ಬಂದದ್ದು ।
ಭೋಗ ಮುಗಿದಾಗ ನಿಚೇಷ್ಟೆ ಬೀಳುವುದು । ಬೂದಿಯಾಗೆಲ್ಲೆಡೆಗೆ ಹಾರಿಹೋಗುವದು ॥ 12

ಇದೇ ಸ್ಥಿತಿ ನಿಮ್ಮದು ನನ್ನದು । ನೆನಪಿರಬೇಕು ನಿಮಗದು ।
ಹಗಲಿರುಳೂ ನಾನೂ ಸ್ಮರಣೆಯಲ್ಲಿಡುವದು । ಅದಕಾಗಿ ವಿಭೂತಿ ಕೊಡುವುದು ॥13

ಅಖಿಲ ಬ್ರಹಾಂಡ ಮಾಯಾಮಯವಿದ್ದು । ಬ್ರಹ್ಮ ಸತ್ಯ ಬ್ರಹ್ಮಾಂಡ ಮಿಥ್ಯವಿದು ।
ನಿಜದಲಿ ಈ ಉದಿ ಅವರದೇ ಗುರುತೆಂದು । ನಿಶ್ಚಿತಾರ್ಥವಿದು ಮನಕೆ ॥ 14

ಇಲ್ಲಿ ಇಲ್ಲ ಯಾರಿಗೆ ಯಾರೂ । ಹೆಂಡತಿ ಮಕ್ಕಳು ನಮ್ಮವರು ತಮ್ಮವರು ।
ನಗ್ನರಾಗಿ ಬಂದು ನಗ್ನರಾಗಿಯೇ ಹೋಗುವರು । ಉದಿ ಇದರದೇ ಸ್ಮಾರಕ ॥ 15

ಈ ಉದಿಯ ಮಾಡಲು ಚರ್ಚನ । ಆದಿ ವ್ಯಾಧಿಗಳದಾಗುವದು ನಿರಸನ ।
ಆದರೀ ಉದಿಯ ತತ್ವಾರ್ಥ ಗಹನ । ವಿವೇಕಪೂರ್ಣ ವೈರಾಗ್ಯ ॥ 16

ಕೈಲಾದಷ್ಟು ದಕ್ಷಿಣೆಯನಿತ್ತು । ವೈರಾಗ್ಯ ಲಕ್ಷಣವ ಸಾಧಿಸಿ ಇನಿತು ।
ಬಳಿಕ ಮುಂದೆ ನಿವೃತ್ತಿ ವೈರಾಗ್ಯದ ಗುರುತು । ಮೆಲ್ಲ ಮೆಲ್ಲಗದು ತಿಳಿಯುವದು ನಿಮಗೆ ॥ 17

ವೈರಾಗ್ಯವು ಕೈಗೆ ಬಂದಲ್ಲಿ । ವಿವೇಕದ ಜೊತೆ ಇರದಿದ್ದಲ್ಲಿ ।
ಅದೆಲ್ಲ ಕೂಡಿ ಹೋಗುವದು ಮಣ್ಣಿನಲ್ಲಿ । ಅದಕೆ ವಿಭೂತಿಯ ಪಡೆಯಿರಿ ॥ 18

ವಿವೇಕ ವೈರಾಗ್ಯಗಳು ಜೊತೆ । ಅದೇ ಈ ವಿಭೂತಿ ದಕ್ಷಿಣೆಗಳಿಗೂ ಸಾಂಗತ್ಯ ।
ಒಡ್ಡ ಹಾಕಿ ತಡೆಯದಿದ್ದರೆ ಈ ಭವನದಿಯ । ದಡ ಮುಟ್ಟುವದು ದುಸ್ತರ ॥ 19

ಹಿರಿಕಿರಿಯರೆಲ್ಲ ಬರುತಿದ್ದರು । ಬಾಬಾರ ಚರಣಗಳ ವಂದಿಸುತಿದ್ದರು ।
ಯಾವಾಗ ತಿರುಗಿ ಹೊರಡುತಿದ್ದರವರು । ಬಾಬಾ ವಿಭೂತಿ ಕೊಡುತಿದ್ದರವರಿಗೆ ॥20

ನಿತ್ಯವೂ ಧುನಿ ಮಶೀದಿಯಲ್ಲಿ । ಅಕ್ಷಯ ಉರಿಯುತಿತ್ತು ಹಗಲಿರುಳುಗಳಲಿ ।
ಬಾಬಾ ಅವರಿಗೆ ನಿರೋಪ ಕೊಡುತಲಿ । ಅದರೊಳಗಿನ ರಕ್ಷೆಯ ಕೊಟ್ಟು ಮುಷ್ಠಿ ತುಂಬ ॥ 21

ಪ್ರಸಾದವೆಂದು ಬೂದಿ ಕೊಡುವರು । ತಮ್ಮ ಕೈಯಿಂದ ಹಣೆಗೆ ಹಚ್ಚುವರು ।
ಕೂಡಲೇ ಅದೇ ಕೈ ತಲೆಯ ಮೇಲಿಡುವರು । ಭಕ್ತರಿಗೆ ಕಲ್ಯಾಣ ಹಾರೈಸುತ ॥ 22

ರಕ್ಷೆ, ವಿಭೂತಿ ಮತ್ತು ಉದಿ । ಮೂರು ಶಬ್ದಗಳು ಒಂದೇ ಅರ್ಥದಿ ।
ಇದೇ ಪ್ರಸಾದ ಯಾವಾಗಲೂ ನಿತ್ಯದಿ । ಬಾಬಾ ಎಲ್ಲರಿಗೂ ಹಂಚುತಿದ್ದರು ॥ 23

ಸಂಸಾರವಿರುವದು ಈ ಉದಿಯ ಹಾಗೆ । ಇದೊಂದೇ ಮಹಿಮೆ ಈ ಉದಿಗೆ ।
ಬಂದೀತು ಒಂದು ದಿನ ಹೀಗೆ । ನೆನಪಿನಲ್ಲಿದನಿಡಬೇಕು ನೀವು ॥ 24

ಕಮಲದಲ ಜಲದಂತಿದು । ಈ ನಶ್ವರ ದೇಹ ಬಿದ್ದು ಹೋಗುವದು ।
ಅದಕಾಗಿ ಇದರ ಅಭಿಮಾನ ತ್ಯಜಿಸುವದು । ಎಂಬುದನೇ ಈ ಉದಿ-ದಾನ ತಿಳಿಸುವದು ॥ 25

ಈ ಎಲ್ಲ ವಿಶ್ವದ ಹರವು । ಮುಷ್ಠಿ ಬೂದಿಯಂತಿದರ ಇರುವು ।
ಉದಿಯಲಿ ಈ ಸತ್ಯದ ಅರಿವು । ಜಗನ್ಮಿಥ್ಯಾ ಎಂಬ ವಿಚಾರದ್ದು ॥ 26

ಉದಿ ಎಂದರೆ ಕೇವಲ ಮೃತ್ತಿಕೆ । ಅಂತಿಮಗತಿ ಅಲ್ಲಿ ನಾಮರೂಪಕೆ ।
ಬ್ರಹ್ಮನಿರ್ಮಿತ ಈ ವಿಕಾರಮಯ ಜಗದಕೆ । ಮಣ್ಣೇ ಸತ್ಯದಲಿದರ ಪ್ರತೀತಿ ॥ 27

ಸ್ವತಃ ಬಾಬಾರೂ ಅಕ್ಕರೆಯಿಂದ । ಕೇಳಿರುವರು ಹಾಡು ಹೇಳುವದ ।
ಉದಿಯ ಮಟ್ಟಿಗೆ ಅದರೊಳಗಿನ ಮಾತೊಂದ । ಹೇಳುವೆನು ಕೇಳಿರಿ ಆದರದಿ ॥ 28

"ರಮತೆ ರಾಮ ಆಯೋಜಿ ಆಯೋಜಿ । ಉದಿಯಾಕಿ ಗೋನಿಯಾ ಆಯೋಜಿ" ॥ಧೃ॥

ಬಂದಾಗ ಮನಸಿಗೆ ಸ್ಫೂರ್ತಿ । ಬಾಬಾ ಆಗಿ ಹರ್ಷ ನಿರ್ಭರ ।
ಇಷ್ಟೇ ಧೃಪದವ ಸುಸ್ವರ । ಮೇಲಿಂದ ಮೇಲೆ ಹಾಡುತಿದ್ದರು ॥ 29

ಸಾರಾಂಶವೆಂದರೆ ಈ ಬಾಬಾರ ಧುನಿ । ಹುಟ್ಟಿಸಿತು ಎಷ್ಟೋ ಉದಿಯ ಗೋಣಿ ।
ಸಮರ್ಥರಾರು ಈ ಪರಮ ಕಲ್ಯಾಣಿ । ಉದಿಯ ಎಣಿಕೆ ಮಾಡಲು ॥ 30

ಕೇಳಿ ಉದಿದಾನದ ಗುಹ್ಯಾರ್ಥ । ಅಂತೆಯೇ ಪರಮಾರ್ಥ ಮತ್ತು ಭಾವಾರ್ಥ ।
ಶ್ರೋತೃಗಳು ಕೇಳುವರು ಶುದ್ಧ ಸ್ವಾರ್ಥ । ಯೋಗ ಕ್ಷೇಮಾರ್ಥವಾಗಿ ಉದಿಯದು ॥ 31

ಉದಿಯಲ್ಲಿ ಈ ಗುಣವೂ ಇರುವದು । ಇದರ ಹೊರತು ಅದರ ಮಹತಿ ಹೇಗೆ ಬೆಳೆಯುವರು ।
ಸಾಯಿಯು ಪರಮಾರ್ಥ ಮಾರ್ಗದ ಧುರೀಣನಾಗಿದ್ದು । ಸ್ವಾರ್ಥವನನುಸರಿಸಿ ಪರಮಾರ್ಥ ಕೊಡುವ ॥ಮ 32

ಈ ಉದಿಯ ಯೋಗಕ್ಷೇಮದ ಕಥೆಗಳು । ಅಗಣಿತವಾಗಿರುವವುಗಳು ।
ಆದರೆ ಹೇಳುವೆನವುಗಳ ಸಂಕ್ಷಿಪ್ತದೊಳು । ಗ್ರಂಥ ವಿಸ್ತಾರ ಬೆಳೆಯದಿರಲೆಂದು ॥ 33

ಒಮ್ಮೆ ನಾರಾಯಣ ಮೋತಿರಾಮ । ಜಾನೀ ಎಂದವನ ಉಪನಾಮ ।
ಔದೀಚ್ಯ ಬ್ರಾಹ್ಮಣ ಗೃಹಸ್ಥಾಶ್ರಮ । ನಾಶಿಕದಲ್ಲಿ ವಾಸಿಸುವವ ॥ 34

ಅಂತೆಯೇ ಬಾಬಾರ ಇನ್ನೊಬ್ಬ ಭಕ್ತರು । ರಾಮಚಂದ್ರ ವಾಮನ ಮೋಡಕ ಎಂಬವರು ।
ನಾರಾಯಣರಾಯ ಅವರ ಸೇವಕನ ಹೆಸರು । ಬಾಬಾರ ಭಾವಿಕ ಭಕ್ತ ॥ 35

ಬಾಬಾ ದೇಹಧಾರಿಯಾಗಿದ್ದಾಗ್ಯೆ । ಮಾತೆಯನು ಕರೆದುಕೊಂಡು ಜೊತೆಗೆ ।
ನಾರಾಯಣರಾಯರು ಹೋದರಲ್ಲಿಗೆ । ಬಾಬಾರ ದರ್ಶನಾರ್ಥಿಗಳಾಗಿ ॥ 36

ಆಗ ತಾವಾಗಿಯೇ ಅವಳಿಗೆ । ಹೇಳಿಬಿಟ್ಟಿದ್ದರು ಮೊದಲಿಗೇ ।
ಇನ್ನು ಮುಂದೆ ಸೇವಾ ಧರ್ಮದೊಳಗೆ । ನಮ್ಮ ಸಂಬಂಧ ಉಳಿಯಲಿಲ್ಲ ॥ 37

ಈ ಪರತಂತ್ರತೆ ಸಾಕಿನ್ನು । ಮಾಡಬೇಕು ಸ್ವತಂತ್ರ ಉದ್ಯೋಗವನ್ನು ।
ಮುಂದೆ ಕಳೆಯಲು ಅಲ್ಪ ಕಾಲವನು । ದೇವರಿಗೆ ದಯೆ ಬಂದಿತು ॥ 38

ಪರಾಧೀನತೆಯ ನೌಕರಿಯ ಬಿಟ್ಟು । ಸ್ವತಂತ್ರತೆಯ ಇಷ್ಟಪಟ್ಟು ।
ಭೋಜನ ವಸತಿಗ್ರಹ ವ್ಯವಸ್ಥೆಯ ನಿಂತು । ತಮ್ಮದೇ ಸ್ವಂತದ್ದಾಗಿ ಸ್ಥಾಪಿಸಿದರು ॥ 39

'ಆನಂದಾಶ್ರಮ'ವೆಂದು ಹೆಸರಿಟ್ಟರು । ಅದರಲ್ಲಿಯೇ ಶ್ರಮಪಟ್ಟರು ।
ದಿನದಿಕ್ಕೆ ಗಳಿಸಿ ಹೆಸರು । ಮನಸಿಗೆ ಆರಾಮವೆನಿಸಿತು ॥ 40

ಈ ರೀತಿ ನಡೆದ ಸಂಗತಿಯ ಕಂಡು । ಸಾಯಿ ಚರಣದಿ ನಿಷ್ಠೆ ಬೆಳೆದು ।
ಬಳಿಕದ ದೃಢ ಭಕ್ತಿಯ ಸ್ವರೂಪ ತಳೆದು । ಅನುಭವದಲಿಳಿಯಿತು ಮರೆಯದಂತು ॥ 41

ಸಾಯಿಯವರ ವಚನದ ಪ್ರತ್ಯಯ ಬಂತು । ಶ್ರವಣಾರ್ಥಿಗಳಿಗಿದೊಂದು ಕಥೆಯಾಯಿತು ।
ಸಾಯಿ ಚರಣದಲಿ ಪ್ರೀತಿ ಬೆಳೆಯಿತು । ಅಘಟಿತ ಕೃತ್ಯ ಸಾಯಿಯದು ॥ 42

ಅವರು ಯಾವಾಗಲೂ ಮಾತನಾಡುವದು ಪ್ರಥಮ ಪುರುಷದಲಿ । ಆದರೆ ಆ ಮಾತು ಇರುವದು ಬೇರೆಯವರ ವಿಷಯದಲಿ ।
ಲಕ್ಷವಿಟ್ಟು ನೋಡುತಿದ್ದವರಿಗೆ ಹಗಲು ರಾತ್ರಿಗಳಲಿ । ಇದರ ಪ್ರತ್ಯಯ ಬರುತಿತ್ತು ॥ 43

ಮುಂದೆ ಬರಬರುತ ಅನುಭವ । ಬೆಳೆದಂತೆ ಬೆಳೆಯಿತು ಭಕ್ತಿ ಪ್ರೇಮ ವೈಭವ ।
ಇನ್ನೊ ಒಂದು ಅವರ ಅಭಿನವ । ಭಕ್ತಿ ಭಾವವ ಕೇಳಬೇಕು ॥ 44

ಒಂದಾನೊಂದು ದಿವಸ ಹೀಗೇ । ನಾರಾಯಣರಾಯರ ಗೆಳೆಯನಿಗೆ ।
ಚೇಳು ಕಡಿಯಿತು ಒಮ್ಮಿಂದೊಮ್ಮೆಗೇ । ಬಹಳ ವೇದನೆಯಾಗತೊಡಗಿತು ॥ 45

ದಂಶವಾದ ಸ್ಥಳಕ್ಕೆ ಹಚ್ಚಲು । ಬಾಬಾರ ಉದಿ ಬಹಳ ಉಪಯುಕ್ತವಿರಲು ।
ಆಗ ಅದನು ಹುಡುಕಹೋಗಲು । ಎಲ್ಲೆಲ್ಲೂ ಸಿಗಲೊಲ್ಲದು ॥ 46

ಸ್ನೇಹಿತನಿಗೆ ವೇದನೆ ಸಹಿಸಲಾಗದು । ಆದರೆ ಉದಿ ಮಾತ್ರ ಸಿಗಲೇ ವಲ್ಲದು ।
ಬಾಬಾರ ಭಾವಚಿತ್ರದ ದರ್ಶನ ತೆಗೆದುಕೊಂಡು । ಬಾಬಾರಿಗೆ ಬಹುಪರಿ ಬೇಡಿಕೊಂಡು ॥ 47

ಬಳಿಕ ಅಲ್ಲಿಯೇ ಆ ಭಾವಚಿತ್ರದ ಕೆಳಗೆ । ಸುಡುವ ಊದುಬತ್ತಿಯ ಬದಿಗೆ ।
ಬಿದ್ದಿತ್ತು ಒಂದಿಷ್ಟು ಬೂದಿ ಕೆಳಗೆ । ಅದನ್ನೇ ಉದಿ ಎಂದು ಭಾವಿಸಿದರು ॥ 48

ಅದನೊಂದು ಚಿಮಟಿ ತೆಗೆದುಕೊಂಡು । ದಂಶವಾದಲ್ಲಿ ತಿಕ್ಕುತಿದ್ದು ।
ಮುಖದಲಿ ಸಾಯಿಮಂತ್ರ ಜಪಿಸುತಿದ್ದು । ಭಾವವಿದ್ದಲ್ಲಿ ಅನುಭವ ॥ 49

ಕೇಳಿದರೆ ಆಶ್ಚರ್ಯವೆನಿಸೀತು । ರಕ್ಷೆಯ ಬೆರಳಿನಿಂದ ತಿಕ್ಕಿದಾಗ ಕ್ಷಣಹೊತ್ತು ।
ವೇದನೆಯೆಲ್ಲ ಹೊರಟು ಹೋಯಿತು । ಇಬ್ಬರಿಗೂ ಸಂತೋಷ ಉಕ್ಕಿತು ॥ 50

ಇದಾದರು ಊದು ಬತ್ತಿಯ ವಿಭೂತಿಯಾಗಿತ್ತು । ವ್ಯಥೆಯಾಗುವವನಿಗೆ ಹಚ್ಚಲಾಯಿತು ।
ದಾರಿಯಲಿದ್ದ ಮಣ್ಣೂ ಇದನೇ ತೋರಿಸಿತು । ಉದಿಯೆಂದು ಭಾವನೆಯಿಂದದ ಹಚ್ಚಿದಾಗ ॥51

ಮಣ್ಣಾದರೂ ಅದರ ಸಂಸರ್ಗ । ಯಾರಿಗೆ ಆಗಿದೆ ದೇಹಾಲಸ್ಯ ಅಥವಾ ರೋಗ ।
ಅವರಿಗಾಗಿ ಬೇರೆಯವರ ಮೇಲೆ ಮಾಡಿದರೂ ಅದರ ಪ್ರಯೋಗ । ಉಪಯೋಗವಾಗದಿರಲಾರದು ॥52

ಒಮ್ಮೆ ಒಬ್ಬ ಭಕ್ತನ ಮಗಳು । ಗ್ರಂಥಿ ಜ್ವರದಿಂದ ಬಳಲುತಿರಲು ।
ಈ ವಾರ್ತೆಯನು ಕೇಳಲು । ತಂದೆಗೆ ಚಿಂತೆ ಹತ್ತಿತು ॥ 53

ತಂದೆ ವಾಂದ್ರೆಯಲ್ಲಿ ವಾಸವಾಗಿರಲು । ಆ ಮಗಳು ಇರುತಿದ್ದಳಿನ್ನೊಂದು ಊರೊಳು ।
ಉದಿಯ ಸಂಗ್ರಹ ಹತ್ತಿರವಿಲ್ಲದಿರಲು । ನಾನಾಗೆ ಹೇಳಿ ಕಳಿಸಿದ ॥ 54

ತಾವು ಬಾಬಾರ ಪ್ರಾರ್ಥನೆ ಮಾಡಿ । ನನ್ನ ಚಿಂತೆಯನ್ನು ದೂರಮಾಡಿ ।
ಕಳಿಸಬೇಕು ಆಪ್ರಾಸಾದಿಕ ಉದಿ । ಎಂದು ಚಾಂದೋರಕರ ಕೇಳಿಕೊಂಡರು ॥ 55

ಈ ಸುದ್ದಿ ತಿಳಿಸಲು ಹೊರಟವಗೆ । ನಾನಾ ಸಿಕ್ಕರು ದಾರಿಯೊಳಗೆ ।
ಅವರು ತಮ್ಮ ಕುಟುಂಬದ ಜೊತೆಗೆ । ಕಲ್ಯಾಣಕ್ಕೆ ಹೊರಟಿದ್ದರು ॥ 56

ಠಾಣೆ ಶಹರದ ಸ್ಟೇಶನದ ಬಳಿಗೆ । ಇದ್ದಾಗ ಸುದ್ದಿ ಮುಟ್ಟಿತು ಅವರಿಗೆ ।
ಅವರ ಹತ್ತಿರ ಉದಿ ಇಲ್ಲವೆನುವಾಗ್ಯೆ । ಮಾರ್ಗದ ಮೃತ್ತಿಕೆಯನೆತ್ತಿದರು ॥ 57

ಅಲ್ಲಿಯೇ ನಿಂತುಕೊಂಡು ದಾರಿಯೊಳಗೆ । ಬೇಡಿಕೊಂಡರು ಸಾಯಿ ಸಮರ್ಥರಿಗೆ ।
ಹಿಂದೆ ನಿಂತ ಸ್ವಸ್ತ್ರೀಯ ಹಣೆಗೆ । ಉದಿಯೆಂದು ಅದನು ಹಚ್ಚಿದರು ॥ 58

ಇತ್ತ ಕಡೆಗಾ ಭಕ್ತ ಹೊರಟ । ಮಗಳಿದ್ದ ಊರಿನತ್ತ ।
ಅಲ್ಲಿ ಬಂದಾಗ ಅವನಿಗೆ ತಿಳಿಯಿತು ವೃತ್ತಾಂತ । ಅತ್ಯಂತ ಆನಂದವಾಯಿತವನಿಗೆ ॥ 59

ಮಗಳಿಗೆ ಮೂರು ದಿನ ಜ್ವರ । ಬಂದವು ಅತ್ಯಂತ ಪ್ರಖರ ।
ವೇದನಯಿಂದಾದಳು ಜರ್ಜರ । ನಿನ್ನೆಯೇ ಒಂದಿಷ್ಟು ಹಗುರಾಯಿತು ॥ 60

ವಿಚಾರಿಸಲಾಗಿ ಅದೇ ಆ ಸಮಯ । ಉದಿಯ ಹೆಸರಿನಲಿ ಮೃತ್ತಿಕೆಯ ।
ಹಿಡಿದು ಬೇಡಿಕೊಂಡಿದ್ದರು ಸಾಯಿಯ । ಆಗಿನಿಂದಲೇ ಹಗುರಾಗಿತ್ತು ॥ 61

ಇರಲಿ ಆ ಜಡ್ಡಿನ ಕಥೆಯೀಗ । ಸವಿಸ್ತರವಾಗಿ ಪ್ರಸಂಗ ಬಂದಾಗ ।
ಎಂದಾದರೂ ಹೇಳಬಹುದೀಗ । ಉದಿಯ ಸಲುವಾಗಿ ಮಾತ್ರ ಹೇಳಿದೆ ॥ 62

ಇದೇ ಈ ಚಾಂದೋರಕರರು । ಜಾಮನೇರಿನಲ್ಲಿ ಮಾಮಲೇದಾರರಾಗಿದ್ದರು ।
ನಿಜಭಕ್ತ ಕಲ್ಯಾಣ ತತ್ಪರ ಸಾಯಿಸಮರ್ಥರು । ಮಾಡಿದ ಚಮತ್ಕಾರವ ಕೇಳಿರಿ ॥ 63

ಈ ಉದಿಯ ಮಹಿಮೆ ಅಪಾರ । ಶ್ರೋತೃಗಳಾಗಿರಿ ಶ್ರವಣದಲಿ ತತ್ಪರ।
ಹೇಳುವೆನು ಇನ್ನೊಂದು ಚಮತ್ಕಾರ । ಆಶ್ಚರ್ಯವದ ಕೇಳಿ ಎನಿಸಬಹುದು ॥ 64

ಆಸನ್ನ ಪ್ರಸವಳವರ ದುಹಿತೆ । ಅಸಹ್ಯವಾಯಿತು ಪ್ರಸವವ್ಯಥೆ ।
ಜಾಮನೇರಿನಿಂದಲೇ ಕರೆಯತೊಡಗುತೆ । ಸಾಯಿ ಸಮರ್ಥರೇ ಎಂದಾರ್ತರಾಗಿ ॥ 65

ಜಾಮನೇರದಲ್ಲಿ ನಡೆದಿರುವ ಸಂಗತಿಯೆಲ್ಲ । ಶಿರಡಿಯಲಿ ಯಾರಿಗೂ ತಿಳಿದಿರಲಿಲ್ಲ।
ಆದರೆ ಬಾಬಾ ತಿಳಿಯದುದು ಯಾವದೂ ಇರಲಿಲ್ಲ। ಸರ್ವಾಂರ್ಗತ ಸರ್ವಜ್ಞರವರು ॥ 66

ಭಕ್ತರ ಜೊತೆಗವರ ಏಕಾತ್ಮತೆ । ತಿಳಿದು ಅಲ್ಲಿ ನಡೆದ ಅವಸ್ಥೆ ।
ಸಾಯಿ ಸಮರ್ಥರ ಚಿತ್ತ ದ್ರವಿಸುತೆ । ಏನು ಮಾಡಿದರದ ಕೇಳಿ ॥ 67

ಉದಿ ಕಳಿಸಬೇಕೆಂದೆನಿಸಿತವರ ಮನಸಿಗೆ । ಅಷ್ಟರಲಿ ಗೋಸಾವಿ ರಾಮಗೀರ ಎಂಬವನಿಗೆ।
ಎನಿಸತೊಡಗಿತವನ ಮನಸಿಗೆ । ತನ್ನೂರಿಗೆ ಹೋಗಬೇಕೆಂದು ॥ 68

ಅವನ ಊರು ಖಾನದೇಶದಲ್ಲಿದ್ದು । ಹೊರಟರೆಲ್ಲ ಸಿದ್ಧತೆ ಮಾಡಿಕೊಂಡು ।
ಮಶೀದಿಗೆ ಬಂದ ದರ್ಶನಕೆಂದು ಬಾಬಾರ ಚರಣದಲಿ ಆಗ ॥ 69

ಬಾಬಾ ದೇಹಧಾರಿಗಳಾಗಿದ್ದಾಗ್ಯೆ । ಮೊದಲು ಬೀಳದೆ ಅವರ ಚರಣಗಳಿಗೆ ।
ಯಾರೇ ಹೊರಟಿರಲಿ ಎಲ್ಲಿಗೇ । ಅನುಜ್ಞೆ ಪಡೆಯದೆ ಹೋಗುತಿರಲಿಲ್ಲ ॥ 70

ಇರಲಿ ಲಗ್ನ ಅಥವಾ ಮೌಂಜೀ ಬಂಧನ । ಮಂಗಲಕಾರ್ಯ ವಿಧಿವಿಧಾನ ।
ಕಾರ್ಯಕಾರಣ ಅಥವಾ ಪ್ರಯೋಜನ (ವಿಧಿವಿಧಾನ) । ಬಾಬಾರ ಅನುಮೋದನೆ ಬೇಕಾಗುತಿತ್ತು ॥ 71

ಪಡೆಯದೆ ಅವರ ಅನುಜ್ಞಾಪನ । ಉದೀ ಪ್ರಸಾದ ಆಶೀರ್ವಚನ ।
ಆಗಲಾರದು ಕಾರ್ಯನಿರ್ವಿಘ್ನ । ಎಲ್ಲರ ಭಾವನೆ ಹೀಗಿರುವದು ॥ 72

ನಡೆಯುತಿತ್ತು ಆ ಊರಲ್ಲೆಲ್ಲ ಈ ಪ್ರಕಾರ । ಅದರ ಪ್ರಕಾರ ರಾಮಗೀರ ।
ಕಾಲಿಗೆರಗಲು ಬಾಬಾರ ।ಮತ್ತು ಹೊರಡಲು ಅನುಜ್ಞೆ ಬೇಡಲು ॥ 74

ಹೇಳಿದ ಬಾಬಾ ಖಾನದೇಶದವರೆಗೆ । ಹೋಗಿ ಬರುವೆ ನಮ್ಮ ಊರಿಗೆ ।
ಉದಿ ಆಶೀರ್ವಾದಗಳ ಕೊಡಬೇಕೆನಗೆ । ಅನುಜ್ಞೆಯನೂ ಹೊರಡಲು ॥ 75

ಮೊದಲು ಹೋಗು ಜಾಮನೇರಿಗೆ । ಅಲ್ಲಿ ಇಳಿದುಕೋ ನಾನಾರ ಮನೆಯೊಳಗೆ ।
ಬಳಿಕ ನೀ ಹೋಗು ಊರಿಗೆ । ಅಲ್ಲಿ ಅವರ ಸಮಾಚಾರ ತೆಗೆದುಕೊಂಡು ॥ 76

ಹೇಳಿದರು ಮಾಧವರಾವ ದೇಶಪಾಂಡೆಯವರಿಗೆ । ಕಾಗದದ ಮೇಲೆ ಬರೆದುಕೊಡವನಿಗೆ ।
ಅಡಕರರ ಆರತಿಯನು ನಾನಾಗೆ । ಗೋಸಾವಿಯವರ ಕೈಯಲ್ಲಿ ಕೊಡಲವರಿಗೆ ॥ 77

ಬಳಿಕ ಗೋಸಾವಿಗೆ ಉದಿ ಕೊಟ್ಟರು । ಇನ್ನಿಷ್ಟನ್ನು ಒಂದು ಹಾಳಿಯಲ್ಲಿ ಕಟ್ಟಿದರು ।
ಅದನು ಬಾಬಾ ನಾನಾಗೆ ಕಳಿಸಿದರು । ಗೋಸಾವಿಯ ಕೈಯಿಂದ ॥ 78

ಮತ್ತೆ ಬಾಬಾ ನುಡಿದರವಗೆ । ಈ ಆರತಿ ಹಾಡು ಮತ್ತು ಚೀಟಿಗಳನು ಕೊಡು ನಾನಾಗೆ ।
ಕೇಳಿ ಅವರ ಕುಶಲ ಕ್ಷೇಮಗಳ ಬಗ್ಗೆ । ಆಮೇಲೆ ನಿನ್ನೂರಿಗೆ ಹೋಗು ॥ 79

ರಾಮ ಜನಾರ್ಧನರು ಬರೆದ । ಆರತಿ, ಆರತೀ ಜ್ಞಾನಾರಾಜಾ ಎಂಬುದ ।
ಮತ್ತು ಆರತಿ ಸಾಯಿಬಾಬಾದ । ಅಂತಸ್ತೆರಡರದೂ ಸಮಾನವಿದೆ ॥ 80

ರಾಮಾ ಜನಾರ್ಧನ ಜನಾರ್ಧನ ಭಕ್ತ । ಮಾಧವ ಅಡಕರ ಸಾಯಿ ಪದಾಂಕಿತ ।
ಪ್ರಸಾದಪೂರ್ಣ ರಚನೆಗಳೆರಡೂ ಅತ್ಯಂತ । ಅವಿಲ್ಲದ ಭಜನೆ ಅಪೂರ್ಣವಿರುವದು ॥81

ಇರಲಿನ್ನು ಬಾಬಾರಿಗೆ ಹಿಡಿಸಿದ । ಶ್ರೋತೃಗಳೇ ಕೇಳಿರಿ ಸಾದ್ಯಂತ ಆರತಿಪದ ।
ಉದಿಯ ಜೊತೆ ಬಾಬಾ ಕಳಿಸಿದುದ । ಮುಂದೆ ಫಲಶ್ರುತಿಯ ಕಾಣುವಿರಿ ॥ 82

## ಆರತಿ

ಆರತಿ ಸಾಯಿ ಬಾಬಾಗೆ, ಸೌಖ್ಯ ನೀಡುವನೀತ ಜೀವಿಗೆ ।
ಪಾದಧೂಳಿಯ ಕೆಳಗೆ, ಕೊಡು ಆಶ್ರಯ ನೀ ದಾಸಗೆ ॥ ಆರತಿ ॥ಪಲ್ಲ॥

ಸುಟ್ಟು ಭಸ್ಮ ಮಾಡಿ ಕಾಮವ, ಸ್ವಸ್ವರೂಪದಿ ಲೀನನಿರುವೆ ।
ಮುಮುಕ್ಷುಗಳಿಗೆ ತೋರುವ, ನಿಜ ದೃಷ್ಟಿಲೀ ಶ್ರೀರಂಗನ ॥ 1

ಯಾರ ಮನದಲೆಂತು ಭಾವ, ಅದರಂತೆ ಅನುಭವ ।
ಧಯಾಘನನೇ ನೀ ತೋರುವೆ, ಹೀಗಿರುವದು ನಿನ್ನ ಮಾಯ ॥ 2

ನಿಮ್ಮ ನಾಮವ ಜಪಿಸಲು, ದೂರಾಗುವವು ಭವತಾಪಗಳು ।
ಅಗಾಧವೀ ತವಕಾರ್ಯ, ಅನಾಥಗೆ ತೋರುವೆದಾರಿಯ ॥ 3

ಕಲಿಯುಗದಲಿ ಅವತಾರ, ಸಗುಣ ಬ್ರಹ್ಮವೇ ಸಾಕಾರ ।
ಅವತಾರ ತಾಳಿರುವೆ, ಸ್ವಾಮಿ ದತ್ತ ದಿಗಂಬರ । ಸಾಯಿ ದಿಗಂಬರ ॥ 4

ವಾರಕ್ಕೊಮ್ಮೆ ಗುರುವಾರ, ಭಕ್ತರು ಬರುವರು ದರುಶನಕೆ ।
ಪ್ರಭುಪಾದವ ಕಾಣಲು, ಭವಭಯವ ನಿವಾರಿಸಲು ॥ 5

ನನ್ನ ಸಂಪತ್ತಿನ ಭಾಂಡಾರ, ನಿನ್ನ ಚರಣ ರಜಸೇವೆ ।
ಬೇಡಿಕೊಳ್ಳುವೆ ಇದನೇ, ನಿಮ್ಮಲಿ ದೇವರ ದೇವ ॥ 6

ದೀನ ಚಾತುಕದ ಬಯಕೆ, ನಿಜ ಸುಖ ಜಲಪಾನಕೆ ।
ಮಾಧವನ ಮನ ತಣಿಸು, ಉಳಿಸಿಕೊಡು ನಿನ್ನ ಮಾತು ॥ 7
ಆರತಿ ಸಾಯಿ ಬಾಬಾಗೆ ॥

ಗೋಸಾವಿ ನುಡಿದ ಬಾಬಾರಿಗೆ । ಎರಡೇ ರೂಪಾಯಿಗಳಿವೆ ನನ್ನ ಬಳಿಗೆ ।
ಇಷ್ಟರಲಿ ನಾ ಹೇಗೆ । ಜಾಮನೇರಕೆ ಮುಟ್ಟುವೆ ॥ 83

ಬಾಬಾ ಎಂದರು"ನೀ ಹೋಗು ಸುಮ್ಮನೆ । ನಿನ್ನ ವ್ಯವಸ್ಥೆಯಾಗುವದು ತಂತಾನೇ" ।
ಸಾಯಿ ಚರಣದಲಿಟ್ಟು ವಿಶ್ವಾಸವನೇ । ಗೋಸಾವಿ ಊರಿಗೆ ಹೊರಟನು ॥ 84

ಆಜ್ಞೆಯ ವಂದಿಸಿ ಬಾಪೂಗೀರ । ತಿಳಿದುಕೊಂಡು ಬಾಬಾರ ವಿಚಾರ ।
ಉದೀಪ್ರಸಾದದೊಡನೆ ಸತ್ವರ । ಕಾರ್ಯತತ್ಪರನಾಗಿ ಹೊರಟ ॥ 85

ಈಗಿನಂತಾಗ ಜಾಮನೇರಕೆ । ಉಗಿಬಂಡಿ ಇರಲಿಲ್ಲ ಪ್ರವಾಸಕೆ ।
ಸೌಲಭ್ಯಗಳೂ ಇರಲಿಲ್ಲ ಹೋಗುವದಕೆ । ಚಿಂತೆಯಾಯಿತು ಗೋಸಾವಿಗೆ ॥ 86

ಉಗಿಬಂಡಿಯಲ್ಲಿ ಕುಳಿತಿದ್ದು । ಪ್ರವಾಸಿಗಳು ಜಳಗಾವಿಗೆ ಇಳಿದು ।
ಅಲ್ಲಿಂದ ಹೋಗಬೇಕಾಗಿತ್ತು ನಡೆದು । ಮುಂದಿನ ಮಾರ್ಗವನ್ನೆಲ್ಲ ॥ 87

ಒಂದು ರೂಪಾಯಿ ಹದಿ ನಾಲ್ಕು ಆಣೆ । ಕೊಟ್ಟುಕೊಂಡನು ಉಗಿಬಂಡಿಯ ತಿಕೀಟನ್ನೇ ।
ಇನ್ನವನ ಬಳಿ ಉಳಿದದ್ದು ಎರಡೇ ಆಣೆ । ಮುಂದೆ ಹೇಗೆ ಹೋಗಬೇಕು ॥ 88

ಗೋಸಾವಿ ಚಿಂತೆ ಮಾಡುತ ಹೀಗೆ । ಇಳಿದ ಜಳಗಾವ ಸ್ಟೇಶನ್ನಿಗೆ ।
ತೀಕೀಟನಿತ್ತು ಬಂದ ಹೊರಗೆ । ದೂರದಲೊಬ್ಬ ಸಿಪಾಯಿಯ ಕಂಡ ॥ 89

ಆ ಸಿಪಾಯಿ ಹುಡುಕುತ್ತ ಬಂದು । ಆ ಪ್ರವಾಸಿಯ ಮುಂದೆ ನಿಂದು ।
ಶಿರಡಿಯ ಬಾಪೂಗೀರನು ಯಾರೆಂದು । ಹೇಳಬೇಕೆಂದು ಕೇಳಿದನು ॥ 90

ಆ ಸಿಪಾಯಿಯು ಕೇಳುತಿದ್ದುದು । ತನ್ನನ್ನೇ ಎಂದು ತಿಳಿದು ।
ಗೋಸಾವಿ ಅವನ ಮುಂದೆ ಬಂದು । ನಾನೇ ಅವನು ಏನು ಬೇಕಿತ್ತು ಎಂದನು ॥91

ಅವನೆಂದ ನನ್ನ ನಿಮಗಾಗಿಯೇ ಎಂದು । ಚಾಂದೋರಕರರು ಕಳಿಸಿದ್ದು ।
ಬೇಗ ನಡೆಯಿರಿ ಟಾಂಗೆಯಲಿ ಕುಳಿತುಕೊಂಡು । ನಿಮ್ಮದೇ ದಾರಿ ಕಾಯುತಿರುವರು ॥92

ಅತ್ಯಂತ ಆನಂದವಾಯಿತು ಬಾಪೂಗೀರನಿಗೆ । ಶಿರಡಿಯಿಂದ ಸುದ್ದಿ ಬಂದಿರಬೇಕು ನಾನಾಗೆ ।
ಅದರಿಂದ ಟಾಂಗೆ ಬಂದಿದೆ ಹೊತ್ತಿಗೆ ಸರಿಯಾಗೇ । ಇನ್ನು ಚಿಂತೆಯೇ ಕಳೆಯಿತು ॥ 93

ಸಿಪಾಯಿ ಬಹಳ ಚತುರ ಕಂಡ । ಗಡ್ಡ ಕಲ್ಲೇ ಮೀಸೆಗಳ ಬಿಟ್ಟಿದ್ದ ।
ಒಪ್ಪಾಗಿ ವಿಜಾರ ತೊಟ್ಟಿದ್ದ । ಟಾಂಗಾ ಕೂಡ ಸುಂದರವಾಗಿತ್ತು ॥ ೨94

ಅಂದವಿತ್ತು ಟಾಂಗೆಯಂತೆ ಕುದುರೆಯೂ । ಅವೇನು ಬಾಡಿಗೆಗೆ ಬಂದಿದ್ದುವೆಯಾ ? ।
ಕಾರ್ಯ ಉತ್ಸಾಹ ಕಡಿಮೆಯಾ । ಉಳಿದೆಲ್ಲ ಟಾಂಗೆಗಳ ಮುಂದಕೋಡಿತು ಇದು ॥ 95

ರಾತ್ರಿ ಹನ್ನೆರಡು ಗಂಟೆಗೆ । ವೇಗವಾಗಿ ಹೊರಟ ಟಾಂಗೆ ।
ನಿಲ್ಲಿಸಿದನು ಅದ ಬೆಳಿಗ್ಗೆ । ಹಳ್ಳದ ಮಗ್ಗುಲಿಗೆ ದಾರಿಯಲಿ ॥ 96

ಆಗ ಟಾಂಗಾದವ ಕುದುರೆಯನ್ನ । ಬಿಚ್ಚಿದ ಕುಡಿಯಲೆಂದು ನೀರನ್ನ ।
ಹೇಳಿದ ಬರುವೆನು ಇರಿ ಒಂದೇ ಕ್ಷಣ । ಬಳಿಕ ಸುಖವಾಗಿ ಫಲಹಾರ ಮಾಡುವ ॥ 97

ಇದೋ ಒಂದಿಷ್ಟು ನೀರು ತಂದೆ । ತಿನ್ನುವಾ ಇನ್ನು ಮಾವು ಮತ್ತು ಪೇಢೆ ।
ಮತ್ತೆ ಗುಳಪಾಪಡಿಯೂ ಇದೆ । ಕುದುರೆಯ ಹೂಡಿ ನಡೆಯುವಾ ಮತ್ತೆ ॥ 98

ಗಡ್ಡ ಉಡುಪು ಎಲ್ಲ ಮುಸಲ್ಮಾನರದು । ಕೇಳಿ ಅವನು ಮಾತಾಡುವದು ।
ರಾಮಗೀರನ ಮನದಿ ಶಂಕೆ ಬಂದು । ಈ ಫಲಹಾರ ಹೇಗೆ ತಿನಬೇಕು ಎಂದು ॥99

ಎಂದವನ ಜಾತಿಯ ಕೇಳಿದಾಗ್ಯೆ । ಸಂಶಯ ಬಂತೇಕೆ ನಿನಗೆ ।
ನಾನು ಹಿಂದೂ ಗರವಾಲ ಕ್ಷತ್ರಿಯನಿರುವಾಗ್ಯೆ । ಜಾತಿಯಿಂದ ರಜಪೂತನು ॥ 100

ನಿನಗಾಗಿಯೇ ಈ ಫಲಾಹಾರವನ್ನಾದರೂ । ನಾನಾರೇ ನನ್ನ ಹತ್ತಿರ ಕೊಟ್ಟಿರುವರು ।
ಒಂದಿಷ್ಟೂ ಮನದಿ ಶಂಕಿಸದಿರು । ಸ್ವಸ್ಥಚಿತ್ತದಿಂದ ತಿನ್ನಿದನು ॥ 101

ಹೀಗೆ ವಿಶ್ವಾಸ ಉಂಟಾದಾಗ । ಇಬ್ಬರೂ ಫಲಾಹಾರ ತಿಂದರಾಗ ।
ಬಳಿಕ ಟಾಂಗೆಯಲಿ ಮತ್ತೆ ಹೊರಟರಾಗ । ಪ್ರವಾಸ ಮುಗಿದಾಗ ಅರುಣೋದಯ ಆಗಿತ್ತು ॥ 102

ಟಾಂಗಾ ಊರು ಪ್ರವೇಶಿಸಿತು । ಆಗ ನಾನಾರ ಕಛೇರಿ ಕಾಣಹತ್ತಿತು ।
ಕುದುರೆಗಳೂ ನಿಧಾನಿಸಿದವು ಒಂದಿಷ್ಟು । ಆನಂದ ಪಟ್ಟನು ರಾಮಗೀರ ॥ 103

ಗೋಸಾವಿ ಲಘುಶಂಕೆಗಾಗಿ । ಕುಳಿತುಕೊಂಡ ಒಂದೆಡೆಗೆ ಹೋಗಿ ।
ತಿರುಗಿ ಬಂದು ಆ ಸ್ಥಳದಲ್ಲಿ ನೋಡಲಾಗಿ । ಎಂಥ ಆಶ್ಚರ್ಯ ಸಂಭವಿಸಿತು ನೋಡಿ ॥ 104

ಅಲ್ಲಿ ಟಾಂಗಾ ಇಲ್ಲ ಕುದುರೆಯೂ ಇಲ್ಲ । ಟಾಂಗೆಯ ಹೊಡೆಯುವವನೂ ಅಲ್ಲಿ ಇಲ್ಲ ।
ಮತ್ತಾರೂ ಅಲ್ಲಿ ಆಗ ಕಾಣಿಸಲಿಲ್ಲ । ಸ್ಥಳವು ಬರಿದಾಗಿದ್ದನ್ನು ಕಂಡ ॥ 105

ಎಂಥ ಚಮತ್ಕಾರ ಇದು । ನನ್ನನ್ನು ಇಲ್ಲಿಯವರೆಗೆ ಕರೆ ತಂದು ।
ಇಷ್ಟರಲ್ಲಿಯೇ ಎಲ್ಲಿ ಮಾಯವಾಗಿರಬಹುದು । ರಾಮಗೀರನಿಗೆ ವಿಚಾರ ಮನದಿ ॥ 106

ಬುವಾ ಕಚೇರಿಯ ಒಳಗೆ ಹೋಗಿ । ನಾನಾ ನಿಜಗೃಹದಲಿರುವರೆಂದು ತಿಳಿಯಲಾಗಿ ।
ಭೆಟ್ಟಿಯಾಗಲು ಉತ್ಕಂಠಿತರಾಗಿ । ಹೊರಡಲು ಸಿದ್ಧರಾದರಾಗ ॥ 107

ಬುವಾ ದಾರಿಯಲ್ಲಿ ಕೇಳುತ್ತ ಹೊರಟಿದ್ದ । ಸಹಜವಾಗಿ ಮನೆ ಕಂಡು ಹಿಡಿದ ।
ಎದುರುಗಡೆ ಕಟ್ಟೆಯ ಮೇಲೆ ಕುಳಿತುಕೊಂಡ । ನಾನಾ ಒಳಗೆ ಕರೆದರವನ ॥ 108

ಪರಸ್ಪರರು ಭೆಟ್ಟಿಯಾಗಿದ್ದು । ಉದೀ ಆರತಿಪದಗಳ ಹೊರಗೆ ತೆಗೆದು ।
ನಾನಾರೆದುರಿಗೆ ಇಟ್ಟನದು । ಸಂಪೂರ್ಣ ಸಂಗತಿಯ ತಿಳಿಸಿದ ॥ 109

ಆಶ್ಚರ್ಯವೆಂದರೆ ಈ ಉದಿ ಆರತಿಗಳು । ಬಂದ ಕಾಲದಲಿಯೇ ನಾನಾರ ಮಗಳು ।
ಪ್ರಸವ ವಿಲಂಬವಾಗಿ ಒದ್ದಾಡುತ್ತಿದ್ದಳು । ಅತಿಶಯ ಕಷ್ಟದಲಿದ್ದಳು ॥ 110

ಆ ಸಂಕಟ ನಿವಾರಣೆಗೆಂದು । ನವಚಂಡಿ ಹೋಮ ಹೂಡಿದ್ದು ।
ಸಪ್ತಶತಿಯ ಪಾಠಪಠಿಸುತಿದ್ದುದು । ನೋಡಿ ಅಚ್ಚರಿಪಟ್ಟ ಗೋಸಾವಿ ॥ 111

ಅಕಲ್ಪಿತವಾಗಿ ಹಸಿದವನೆದುರಿಗೆ । ಪಕ್ವಾನ್ನಗಳಿಂದ ತುಂಬಿದ ತಟ್ಟೆ ಬಂದ ಹಾಗೆ ।
ಅಥವಾ ತೃಷಿತ ಚಕೋರನ ಮುಖದೊಳಗೆ । ಅಮೃತ ಬಿದ್ದಂತಾಯಿತು ನಾನಾಗೆ ॥ 112

ತಮ್ಮ ಹೆಂಡತಿಯ ಕರೆದರು । ಮಗಳಿಗೆ ಕುಡಿಸಲು ಉದಿಯ ಕೊಟ್ಟರು ।
ತಾವು ಆರತಿಯ ಅನ್ನತೊಡಗಿದರು । ಆ ಕಾಲಕೆ ಸಂತಸದಿ ನಾನಾ ॥ 113

ಕಳೆಯಿತೋ ಇಲ್ಲವೋ ಕ್ಷಣಹೊತ್ತು । ಅಷ್ಟರಲ್ಲಿಯೇ ಒಳಗಿನಿಂದ ಕರೆ ಬಂತು ।
ಮುಖದಿ ಬಿದ್ದ ಕ್ಷಣ ಉದಿಯ ತೊಟ್ಟು । ಆರಾಮವಾಯಿತು ಮಗಳಿಗೆ ॥ 114

ಕೂಡಲೇ ಕ್ಲೇಶ ನಿರ್ಮುಕ್ತಳಾದ । ಮಗಳು ಪ್ರಸವಿಸಿದಳು ನಿರ್ವಿಘ್ನದಿಂದ ।
ಎಲ್ಲ ಸರಿಯಾಗಿ ಬಿಡುಗಡೆಯಾದದ್ದರಿಂದ । ಎಲ್ಲರ ಚಿಂತೆ ದೂರಾಯಿತು ॥ 115

ಆ ಟಾಂಗಾದವ ಎಲ್ಲಿ ಹೋದ । ಇಲ್ಲಿಯೂ ಅವ ಕಾಣದಾದ ।
ರಾಮಗೀರ ನಾನಾರ ಕೇಳಿದ । ನೀವು ಕಳಿಸಿದ ಟಾಂಗಾ ಎಲ್ಲಿದೆ ॥ 116

ನಾನಾ ಎಂದರು ನಾ ಕಳಿಸಿಲ್ಲ । ಯಾವ ಟಾಂಗಾ ನನಗೊಂದೂ ಗೊತ್ತಿಲ್ಲ ।
ನೀವು ಬರುವದೂ ನಮಗೆ ಗೊತ್ತಿರಲಿಲ್ಲ । ಟಾಂಗಾ ಏತಕ್ಕೆ ಕಳಿಸಲಿ ॥ 117

ಆಮೇಲೆ ಬುವಾ ಟಾಂಗಾದ ಕಥೆಯನು । ಆಮೂಲಾಗ್ರವಾಗಿ ಎಲ್ಲರಿಗೂ ಹೇಳಿದನು ।
ಬಾಬಾರ ವಾತ್ಸಲ್ಯವನು ಕಂಡು । ವಿಸ್ಮಯವಾಯಿತು ನಾನಾರಿಗೆ ॥ 118

ಎಲ್ಲಿಯ ಟಾಂಗಾ, ಆಳು ಎಲ್ಲಿಯದು । ಶ್ರೀ ಸಾಯಿ ಸಮರ್ಥರೇ ಈ ನಾಟಕವಾಡಿದ್ದು ।
ಸಂಕಟ ಸಮಯದಲಿ ಓಡಿ ಬಂದು । ಭಕ್ತರ ಕರೆಗೆದುರು ನಿಲ್ಲುವ ॥ 119

ಇನ್ನು ಹಿಂದಿನ ಕಥೆಯ ಎಳೆ ಹಿಡಿದು । ಕಥೆಯ ಸಾಗಿಸುವಾ ಮುಂದು ।
ಮುಂದೆ ಕೆಲ ಕಾಲ ಕಳೆದು । ಬಾಬಾರೂ ನಿರ್ವಾಣ ಹೊಂದಿದರು ॥ 120

ಸನ್ ಹತ್ತೊಂಬತ್ತು ನೂರಾ ಹದಿನೆಂಟು । ವಿಜಯಾದಶಮಿ ದಸರೆಯ ದಿನದಂದು ।
ಬಾಬಾ ಆ ಶುಭ ದಿನವ ಕಂಡು । ನಿಜ ದೇಹವನಿಟ್ಟರು ಧರೆಗೆ ॥ 121

ನಾರಾಯಣರಾಯರು ಅದಕ್ಕೂ ಮೊದಲಿಗೆ । ಬಾಬಾ ಇನ್ನೂ ದೇಹಧಾರಿಗಳಾಗಿದ್ದಾಗ್ಯೆ ।
ದರ್ಶನ ಪಡೆದಿದ್ದರು ಎರಡು ವೇಳೆಗೆ । ಬಳಿಕ ಸಮಾಧಿಯಾಯಿತು ಬಾಬಾರದು ॥ 122

ಸಮಾಧಿಗೆ ಆಗಿದ್ದವು ಮೂರು ವರ್ಷಗಳು । ದರ್ಶನೇಚ್ಛೆ ಬಲವಾಗಿರಲು ।
ಆದರೂ ಯೋಗ್ಯ ಕಾರಣ ಸಿಗದು ಬರಲು । ಅದರಿಂದ ಅಧೀರರಾದರು ॥ 123

ಸಮಾಧಿಯಾಗಿ ಒಂದು ವರ್ಷಕಳೆದಾಗಿನಿಂದ । ನಾರಾಯಣರಾಯರು ಬಳಲುತಿದ್ದರು ವ್ಯಾಧಿಯಿಂದ
।ಎಲ್ಲ ಉಪಾಯಗಳು ಔಷಧೋಪಚಾರದ । ಮುಗಿದರೂ ಗುಣವಾಗಲಿಲ್ಲ ॥ 124

ವ್ಯಾಧಿಯಿಂದ ಸೋತು ಹೋಗಿದ್ದರೂ । ಹಗಲಿರುಳೂ ಬಾಬಾರ ಧ್ಯಾನ ಮಾಡುತಿದ್ದರು ।
ಮರಣವಿರುವದೇ ಗುರುರಾಯನಿಗೆಂದಾದರೂ । ನಾರಾಯಣಗೆ ದರ್ಶನವಿತ್ತರು ॥ 125

ಚಿಂತೆಯನೇನೂ ಮಾಡಬೇಡ । ಗುಣವಾಗುವದು ನಾಳೆಯಿಂದ ।
ಒಂದು ವಾರ ಹೋಗಲಿ ಕಳೆದು । ನಿನ್ನಷ್ಟಕ್ಕೇ ಎದ್ದು ಕುಳಿತುಕೊಳ್ಳುವಿ ॥ 126

ರಾತ್ರಿಯಲಿ ಬಿತ್ತು ಕನಸೊಂದು । ಬಾಬಾ ಒಂದು ಗುಹೆಯೊಳಗಿಂದ ಬಂದು ।
ನಾರಾಯಣರಾಯರನು ಕಂಡು । ಆಶ್ವಾಸನವನಿತ್ತರು ಹೀಗೆ ॥ 127

ಬಳಿಕ ಎಂಟು ದಿನ ಕಳೆಯಿತು । ಬಾಬಾರು ಹೇಳಿದಂತೆಯೇ ಎಲ್ಲ ನಡೆಯಿತು ।
ನಾರಾಯಣರಾಯರು ಎದ್ದು ಕುಳಿತು । ಸಮಾಧಾನಹೊಂದಿದರು ಮನದಲಿ ॥ 128

ಕೆಲವು ದಿನಗಳು ಕಳೆಯಲು ಹೀಗೆ । ನಾರಾಯಣರಾಯರು ಬಂದರು ಶಿರಡಿಗೆ ।
ದರ್ಶನ ತೆಗೆದುಕೊಳ್ಳಲು ಸಮಾಧಿಗೆ । ಆಗ ಈ ಕಥೆಯ ಹೇಳಿದರು ॥ 129

ದೇಹಧರಿಗಳೆಂದು ಜೀವಂತ । ಸಮಾಧಿಸ್ಥರಾದವರು ಹೇಗೆ ಮೃತ ।
ಸಾಯಿ ಜನನ ಮರಣಾತೀತ । ಸ್ಥಿರಚರಗಳಲಿ ತುಂಬಿಹರು ಯಾವಾಗಲೂ ॥ 130

ಬೆಂಕಿ ಕಟ್ಟಿಗೆಯೊಳಗೆ । ಕಾಣದಿದ್ದರೂ ಇರುವದು ಗುಪ್ತವಾಗೇ ।
ಪ್ರದೀಪ್ತವಾಗುವದು ಘರ್ಷಣೆ ಮಾಡಿದಾಗ್ಯೆ । ಈ ಸಾಯಿ ಹಾಗೇ ಭಕ್ತರಿಗಾಗಿ ॥131

ಒಮ್ಮೆ ಪ್ರೇಮದಿಂದ ನೋಡಿದರೆ ಸಾಕು । ಆಜನ್ಮ ಅವರ ಅಂಕಿತರಾಗಿರಬೇಕು ।
ಕೇವಲ ಅನನ್ಯ ಭಕ್ತಿ ಇದ್ದರೆ ಸಾಕು । ಅವನ ಕರೆಗೋಗೊಡುವ ಸಾಯಿ ॥ 132

ಸ್ಥಲ ಕಾಲಗಳೊಂದೂ ಬೇಕಿಲ್ಲದ ಅವ । ಯಾವಾಗಲೂ ನಿಂತೇ ಇರುವ ।
ಎಲ್ಲಿಂದ ಹೇಗೆ ಲೀಲೆ ತೋರುವ । ಅದನಾರೂ ಬಲ್ಲವರಿಲ್ಲ ॥ 133

ಒಂದೊಂದು ಆಟವನು ಹೂಡುವನು ಹೀಗೆ । ಮನದಿ ಕುತರ್ಕಗಳು ಬರಬೇಕು ನಾನಾ ಬಗೆ ।
ಅವನ ಚರಣದಲಿ ದೃಷ್ಟಿ ನಿಂತಾಗ್ಯೆ । ಧ್ಯಾನ ಧಾರಣೆಗಳು ಬೆಳೆಯುವವು ॥ 134

ಏಕಾಗ್ರಮನವಾದಾಗ ಹೀಗೆ । ತೊಡಗುವದು ಅತ್ಯಂತ ಸಾಯಿ ಚಿಂತನದೊಳಗೆ ।
ಇದೇ ಬೇಕಾಗಿರುವದು ಸಾಯಿಗೆ । ಅದರಿಂದ ಕಾರ್ಯನಿರ್ವಿಘ್ನವಾಗುವದು ॥ 135

ಇದಕೆ ವ್ಯವಹಾರಕ್ಕೇನೂ ತಡೆಯಿಲ್ಲ । ತಮ್ಮಷ್ಟಕ್ಕೇ ತೊಲಗುವವು ಹವ್ಯಾಸಗಳೆಲ್ಲ ।
ಕಾರ್ಯವು ಅಪ್ರಯಾಸವಾಗಿ ಆಗುವದೆಲ್ಲ । ಮನವನೀ ರೀತಿ ರೂಢಿಸಿಕೊಳಲು ॥ 136

ಕರ್ಮಭೂಮಿಗೆ ಬಂದಿದೆ ದೇಹ । ಕರ್ಮಗಳು ನಡೆಯುವವು ನಿಃಸಂದೇಹ ।
ಸ್ತ್ರೀಪುತ್ರ-ವಿತ್ತ ಗೇಹ । ಯಥೇಚ್ಛ ಪರಿಗ್ರಹವಾಗಲಿ ॥ 137

ಆಗುವದನು ಆಗಲು ಬಿಡಿ ಯಥೇಷ್ಟ । ಗುರುಚಿಂತನವೇ ನಮ್ಮ ಅಭೀಷ್ಟ ।
ಸಂಕಲ್ಪ ವಿಕಲ್ಪಗಳಾಗುವವು ನಷ್ಟ । ಸಂಚಿತ ಅನಿಷ್ಟ ಕಳೆಯುವದು ॥ 138

ನೋಡಿಕೊಂಡು ಭಕ್ತನ ಭಾವ । ಹೇಗೆ ಸಾಯಿ ಮಹಾನುಭಾವ ।
ಭಕ್ತರಿಗೆ ತೋರುತಿದ್ದರೊಂದೊಂದು ಅನುಭವ । ಅದರಿಂದ ಭಕ್ತಿಯ ವೈಭವ ಬೆಳೆಸುತಿದ್ದರು ॥ 139

ಬೇಕಾದ ಹಾಗೆ ವೇಷ ಧರಿಸುವರು । ಬೇಕೆನಿಸಿದಲ್ಲಿ ಪ್ರಕಟರಾಗುವರು ।
ಭಕ್ತ ಕಲ್ಯಾಣಕ್ಕೆ ಎಲ್ಲೆಲ್ಲಿಯೋ ತಿರುಗುವರು । ಮಾತ್ರ ಶಿಷ್ಯನು ಭಾವಾರ್ಥಿಯಾಗಿರಬೇಕು ॥140

ಇನ್ನೊಂದು ಕಥೆಯನು ಇದರ ಹಾಗೇ । ಕೇಳಿರಿ ಹೇಳುವೆ ತಮ್ಮೆಲ್ಲರಿಗೆ ।
ಸಂತರು ತಮ್ಮ ಭಕ್ತರಿಗಾಗಿ ಹೇಗೆ । ಹಗಲಿರುಳೆನ್ನದೆ ಶ್ರಮಿಸುವರು ॥ 141

ಕಿವಿಯ ಪರದೆಯ ದೂರ ಮಾಡಿ । ಹೃದಯ ಮಂದಿರವ ತೆರೆದಿಡಿ ।
ಈ ಕಥೆಯನೊಳಗೆ ಸೇರಗೊಡಿ । ಭವ ಭಯದ ಅಡ್ಡಿಯು ದೂರವಾಗುವದು ॥142

ಇದೀಗ ಮುಗಿದಿರುವ ಪ್ರಸಿದ್ಧ । ಪರದೇಶೀಯರ ಯುದ್ಧ ।
ಮಾಡಹತ್ತಿದರು ಲಷ್ಕರವ ಸಿದ್ಧ । ಶತ್ರುಗಳ ವಿರುದ್ಧ ಸಂಗ್ರಾಮಕೆ ॥ 143

ಆಂಗ್ಲಸತ್ತೆಯ ರಾಜ್ಯಾಧಿಕಾರಿಗಳು । ಈ ನಮ್ಮ ಭರತ ಭೂಮಿಯೊಳು ।
ಲಷ್ಕರ ಭರತೀ ಊರೊಳು । ಮಾಡುತಿದ್ದರು ಎಲ್ಲೆಡೆಗೆ ॥ 144

ಸನ ಹತ್ತೊಂಬತ್ತು ನೂರಾ ಹದಿನೇಳನೇ ವರ್ಷದಿ । ಒಬ್ಬ ಭಕ್ತನದು ಬಂದಿತು ಸರದಿ ।
ಠಾಣೆ ಜಿಲ್ಹೆಯಲ್ಲಾಯಿತು ನೇಮಕಾತಿ । ಆಗೊಂದು ವಿಚಿತ್ರ ಕಥೆ ನಡೆಯಿತು ॥ 145

ಅಪ್ಪಾ ಸಾಹೇಬ ಕುಲಕರ್ಣಿ ಅವನ ಹೆಸರು । ಸಾಯಿ ಚರಣದಲಿ ಭಾವವಿಟ್ಟವರು ।
ಸಾಯಿಯದೇ ಪ್ರಭಾವ ಇದಾದರೂ । ಅಗಾಧಲೀಲೆ ಅವರದ್ದು ॥ 146

ಸಂಗತಿ ಕೆಲವರ್ಷ ಪೂರ್ವದಲ್ಲಿ ನಡೆದ । ಬಾಳಾಸಾಹೇಬ ಭಾಟೆಯವರಿಂದ ।
ಪ್ರಾಪ್ತವಾದ ಬಾಬಾರ ಭಾವಚಿತ್ರವೊಂದ । ಪೂಜೆಯಲ್ಲಿ ಇರಿಸಿದ್ದರು ॥ 147

ಕಾಯಾ ವಾಚಾ ಮನಗಳಿಂದ । ಪ್ರಾಪ್ತವಿದ್ದ ಗಂಧಾಕ್ಷತೆ ಪುಷ್ಪಗಳಿಂದ ।
ಪೂಜಿಸುತಿದ್ದರು ನಿತ್ಯನೇಮದಿಂದ । ನೈವೇದ್ಯವನೂ ತೋರಿಸುತಿದ್ದರು ॥ 148

ಈ ಕರ್ಮಭೋಗ ಯಾವಾಗ ಮುಗಿಯುವದು । ಮನದಲ್ಲಿದ್ದಂತೆ ಆಗುವದೆಂದು ।
ಪ್ರತ್ಯಕ್ಷ ದರ್ಶನ ಯೋಗ ಸಾಯಿಯದು । ಎಂಬ ಹೃದ್ರೋಗ ಹಿಡಯಿತು ಅಪ್ಪಾಗೆ ॥149

ಸಾಯಿಬಾಬಾರ ಪಟದ ದರ್ಶನ । ಅದೂ ಪ್ರತ್ಯಕ್ಷ ದರ್ಶನ ಸಮಾನ ।
ಭಾವ ಮಾತ್ರ ಇರಬೇಕು ಪೂರ್ಣ । ಸಮಯ ಬಂದಾಗ ಗುರುತು ಕಂಡೀತು ॥150

ಕೇವಲ ಭಾವಚಿತ್ರದ ದರ್ಶನವೂ । ಪ್ರತ್ಯಕ್ಷ ದರ್ಶನಕೆ ಸಮಾನವು ।
ಇದರ ಬಗ್ಗೆ ಅನ್ವರ್ಥವು । ಇರುವದು ಶ್ರೋತೃಗಳೇ ಆಲಿಸಿರಿ ॥ 151

ಒಮ್ಮೆ ಬಾಳಾ ಬುವಾ ಎಂಬ ಬಡಿಗರವ । ಮುಂಬಯಿಯ ನಿವಾಸಿ ಭಜನೆಗಳ ಹಾಡುವವ ।
ಅರ್ವಾಚೀನ ತುಕಾರಾಮ ಎನಿಸಿಕೊಂಡವ । ದರ್ಶನಕೆ ಶಿರಡಿಗೆ ಹೋದನು ॥ 152

ಇದೇ ಅವನ ಪ್ರಥಮ ಭೆಟ್ಟಿಯಾಗಿದ್ದು । ಮೊದಲೆಂದೂ ಒಬ್ಬರನೊಬ್ಬರು ನೋಡದೇ ಇದ್ದು ।
ದೃಷ್ಟಿ ಕೂಡಿದಾಗ ಇಬ್ಬರದೂ । ಸಾಯಿ ಸ್ಪಷ್ಟವಾಗಿ ಅವನಿಗೆಂದರು ॥ 153

ನಾಲ್ಕು ವರ್ಷಗಳ ಹಿಂದಿನಿಂದೂ । ನನಗಿವನ ಗುರುತು ಇರುವದು ।
ಬಾಳಾಬುವಾ ವಿಸ್ಮಯಗೊಂಡು । ಹೀಗೇಕೆ ಇವರೆನ್ನುತಿರುವರು ತಿಳಿಯದೆ ॥ 154

ಬಾಬಾ ಶಿರಡಿಯ ಬಿಟ್ಟಿಲ್ಲ ಎಂದೂ । ನಾನಾದರೂ ಕಣ್ಣೆದುರು ಇಂದೇ ಕಂಡದ್ದು ।
ಹೀಗಿರುವಾಗ ನಾಲ್ಕು ವರ್ಷಗಳ ಹಿಂದೆ ನನ್ನದು । ಗುರುತಾಗಿದೆನ್ನುವರದು ಹೇಗೆ ॥ 155

ಹೀಗೆ ವಿಚಾರ ನಡೆಯಿತು । ನಾಲ್ಕು ವರ್ಷಗಳ ಹಿಂದಿನ ಮಾತು ।
ಬಾಬಾರ ನಮಿಸಿದ್ದು ಚಿತ್ರದಲಿ ಇಂತು । ಬುವಾನ ನೆನಪಿಗೆ ಬಂದಿತು ॥ 156

ಬಳಿಕ ಆ ಮಾತಿನ ಅನ್ವರ್ಥತೆಯನು । ಬಾಳಾಬುವಾ ಒಪ್ಪಿದರದನು ।
ಎಂದರು ಸಂತರ ವ್ಯಾಪಕತೆಯನೂ । ಭಕ್ತವತ್ಸಲತೆಯನೂ ಸತ್ಯವೆಂದು ॥ 157

ನಾನಂತೂ ಬರೀ ಚಿತ್ರವ ನಮಿಸಿದ್ದೆ । ಆದರೆ ಇಂದು ಪ್ರತ್ಯಕ್ಷ ಕಂಡೆ ।
ನಾನದನು ಮರೆತೇ ಬಿಟ್ಟಿದ್ದೆ । ಆದರೆ ಬಾಬಾ ಅದನು ನೆನಪಿಸಿದರು ॥ 158

ಮರೆತಿದ್ದೆನೆಂಬದೂ ಸರಿಯಲ್ಲ । ಆದರೆ ಕೂಡಲೇ ಬಾಬಾರ ಮಾತು ಅರ್ಥವಾಗಲಿಲ್ಲ ।
ನಾನು ತಿಳಿಯಲು ಸಮರ್ಥನಾಗಲ್ಲಿ । ಚಿತ್ರ ನಮನಕ್ಕೆ ಗುರುತೆ ಅರ್ಥವನು ॥ 159

ಬಾಬಾರಿಗೆ ನನ್ನ ಗುರುತಿತ್ತು । ನನಗೆ ಮಾತ್ರ ಅದು ತಿಳಿಯದಾಗಿತ್ತು ।
ಸಂತರೇ ನೆನಪು ಮಾಡಿದಾಗ ಇಂತು । ಆಗ ನನಗೆ ಗೊತ್ತಾಯಿತು ॥3 160

ಸ್ವಚ್ಛ ಕನ್ನಡಿ ಸ್ವಚ್ಛ ಉದಕದಂತೆ । ಅಲ್ಲಿ ಬಿಂಬವೇ ಪ್ರತಿಬಿಂಬಿತವಾಗುವಂತೆ ।
ಚಿತ್ರವಾದರೂ ಪ್ರತಿಬಿಂಬದಂತೆ । ಶುದ್ಧ ಪ್ರತೀಕವದು ಬಿಂಬದ್ದು ॥ 161

ಆದಕೆ ಸಂತರ ಚಿತ್ರದ ದರ್ಶನ । ಇರುವದು ಪ್ರತ್ಯಕ್ಷ ದರ್ಶನದ ಸಮಾನ ।
ಸಂತರ ಸರ್ವದರ್ಶಿತ್ವತನ । ಇದೇ ಶಿಕ್ಷಣ ಎಲ್ಲರಿಗೂ ॥ 162

ಇರಲಿನ್ನು ಹಿಂದಿನ ಕತೆಯನ್ನು । ಲಕ್ಷಗೊಟ್ಟು ಕೇಳಿರಿದನು ।
ಇಟ್ಟು ಇದರ ಅನುಸಂಧಾನತೆಯನು । ಶ್ರೋತೃಗಳು ತಮ್ಮ ಚಿತ್ತದಲ್ಲಿ ॥ 163

ಅಪ್ಪಾ ಇರುತಿದ್ದುದು ಠಾಣೆಯಲ್ಲಿ । ಕೆಲಸವೊಂದು ಬಂದಿತು ಭಿವಂಡಿಯಲ್ಲಿ ।
ತಿರುಗಿ ಬರುವೆನು ಎಂಟು ದಿನಗಳಲಿ । ಎಂದು ಹೇಳಿ ಹೊರಗೆ ಹೋದರು ॥ 164

ಎರಡು ದಿನಗಳು ಕಳೆಯುವದರೊಳಗೆ । ಅಪೂರ್ವ ಘಟನೆಯೊಂದು ನಡೆಯಿತಿಲ್ಲಿ ಮನೆಯೊಳಗೆ ।
ಒಬ್ಬ ಫಕೀರ ಬಂದ ಬಾಗಿಲಿಗೆ । ಠಾಣೆಯಲ್ಲಿ ಅವರ ಮನೆಗೆ ॥ 165

ಅವನನ್ನು ಕಂಡಲಾಗಾಯಿತು । ಸಾಯಿಯೇ ಇವರೆಂದು ಎಲ್ಲರಿಗೂ ಸ್ಪಷ್ಟವಾಗಿ ಎನಿಸಿತು ।
ಭಾವ ಚಿತ್ರದಂತೆಯೇ ಬಿಡದೆ ಇನಿತು । ರೂಪರೇಖೆಗಳು ಸಂಪೂರ್ಣ ॥ 166

ಕುಟುಂಬ ಮತ್ತು ಮಕ್ಕಳದು । ಫಕೀರನತ್ತಲೇ ದೃಷ್ಟಿ ಎಲ್ಲರದೂ ।
ಎಲ್ಲರೂ ವಿಸ್ಮಿತರಾಗಿದ್ದು । ಬಾಬಾರೇ ಬಂದರೆನ್ನಿಸಿತು ॥ 167

ಮೊದಲೆಂದೂ ಆಗಿಲ್ಲ ಪ್ರತ್ಯಕ್ಷ ದರ್ಶನ । ಆದರೆ ಚಿತ್ರದೊಡನಿರುವ ಸಾದೃಶ್ಯತೆಯನ ।
ನೋಡಿ ತಿಳಿದರು ಇವರು ಬಾಬಾ ಎಂಬದನ । ಜಿಜ್ಞಾಸೆ ಎಲ್ಲರಲಿ ಹುಟ್ಟಿತು ॥ 168

ತಾವು ಶಿರಡಿಯ ಸಾಯಿಯವರು ಹೌದೇನು । ಎಲ್ಲರೂ ಫಕೀರನಿಗೆ ಕೇಳಿದರು ಪ್ರಶ್ನೆಯನು ।
ಅದಕಾ ಫಕೀರನೆಂದುದನ್ನು । ಶ್ರೋತೃಗಳೇ ಆಲಿಸಿರಿ ಚಿತ್ತಗೊಟ್ಟು ॥ 169

ಸಾಯಿಯೇ ಸ್ವತಃ ಅಲ್ಲ ನಾನು । ಆದರೆ ಅವರ ಆಜ್ಞಾಂಕಿತ ದಾಸನು ।
ಮಕ್ಕಳು ಮರಿಗಳ ಸಮಾಚಾರವನು । ತಿಳಿದುಕೊಳ್ಳಲು ಅವರಾಜ್ಞೆಯಿಂದ ಬಂದೆ ॥ 170

ಬಳಿಕವನು ದಕ್ಷಿಣೆ ಕೇಳತೊಡಗಲು । ಆ ಮಕ್ಕಳ ತಾಯಿ ಆಗಲೆಂದಳು ।
ಕೂಡಲೇ ಒಂದು ರೂಪಾಯಿ ಕೊಟ್ಟಳು । ಅವನೂ ಉದೀ ಪ್ರಸಾದಗಳನಿತ್ತ ॥ 171

ಸಾಯಿಬಾಬಾರ ವಿಭೂತಿಯನ್ನು । ಆ ಸ್ತ್ರೀಗೇ ಚೀಟಿಯಲಿ ಕಟ್ಟಿಕೊಟ್ಟನು ।
ಎಂದನು ಆ ಚಿತ್ರದ ಬದಿಯಲಿಡಿರಿದನು । ಸೌಖ್ಯ ಪ್ರಾಪ್ತಿಯಾಗುವದು ॥ 172

ಹೀಗೆ ನಿಜ ಕಾರ್ಯವ ಮುಗಿಸಿಕೊಂಡು । ಸಾಯಿ ದಾರಿ ನೋಡುತಿರಬಹುದೆಂದು ।
ಹೇಳಿ ಹೊರಟನು ಅಪ್ಪಣೆ ಪಡೆದು । ತನ್ನ ಮಾರ್ಗ ಹಿಡಿದನು ಫಕೀರ ॥ 173

ಬಳಿಕವನು ಅಲ್ಲಿಂದ ಹೊರಟ । ಬಂದ ದಾರಿಯಿಂದ ಹೋಗಿಬಿಟ್ಟ ।
ಇತ್ತಕಡೆಗಾಗ ನಡೆದ ವೃತ್ತಾಂತ । ಅಪೂರ್ವ ಲೀಲೆ ಸಾಯಿಯದು ॥ 174

ಅಪ್ಪಾಸಾಹೇಬ ಭಿವಂಡಿಗೆ ಹೊರಟರು । ಆದರೆ ಮುಂದೆ ಹೋಗದೇ ತಿರುಗಿ ಬಂದರು ।
ಟಾಂಗಾದ ಕುದುರೆಗೆ ಅನಾರೋಗ್ಯವೆಂದರು । ಹೋಗವದು ಅಲ್ಲಿಯೇ ನಿಂತಿತು ॥ 175

ಮದ್ಯಾಹ್ನದಲಿ ಅವರು ಠಾಣೆಗೆ ಬಂದರು । ನಡೆದ ವೃತ್ತವನೆಲ್ಲ ಕೇಳಿದರು ।
ಅಪ್ಪಾ ಸಾಹೇಬರು ಮನದಲಿಹಳಹಳಿಸಿದರು । ತಮಗೆ ದರ್ಶನ ತಪ್ಪಿತೆಂದು ॥ 176

ಒಂದೇ ರೂಪಾಯಿ ದಕ್ಷಿಣೆ ಕೊಟ್ಟಿತು । ಅದರಿಂದ ಮನಸ್ಸಿಗೆ ನಾಚಿಕೆ ಎನಿಸಿತು ।
ನಾನಿರುತಿದ್ದರೆ ಕನಿಷ್ಠ ಹತ್ತು । ಕೊಡದೇ ಇರುತ್ತಿರಲಿಲ್ಲ ॥ 177

ಅಪ್ಪಾ ಸಾಹೇಬರು ಹೀಗೆಂದು । ಮನಸಿಗೆ ಒಂದಿಷ್ಟು ಕೆಡಕೆನಿಸಿದ್ದು ।
ಫಕೀರ ಮಶೀದಿಯಲಿ ಸಿಗಬಹುದೆಂದು । ಉಪವಾಸವೇ ಶೋಧಿಸಲು ಹೊರಟರು ॥178

ಮಶೀದಿ ತಕಿಯಾ ಅಲ್ಲಲ್ಲಿಗೆ । ಜನ ಇಳಿದುಕೊಳ್ಳುವಂಥ ಸ್ಥಳಗಳಿಗೆ ।
ಹುಡುಕಿದರು ಅಪ್ಪಾ ಹೋಗಿ ಎಲ್ಲ ಸ್ಥಾನಗಳಿಗೆ । ಆ ಫಕೀರನಿಗಾಗಿ ॥ 179

ಹುಡುಕಿ ಹುಡುಕಿ ದಣಿದರು । ಫಕೀರನನೆಲ್ಲೂ ಕಾಣದಾದರು ।
ಆಗ ಹಸಿದಿದ್ದ ಅವರು ಹೋಗಿ ಊಟ ಮಾಡಿದರು । ಬಹಳ ನಿರಾಶೆಯಾಯಿತು ॥ 180

ಆದರವನಿಗೆ ಗೊತ್ತಿರದು । ಹಸಿದ ಹೊಟ್ಟೆಯಲಿ ಹುಡುಕಲು ಹೋಗಬಾರದು ।
ಮೊದಲು ತನ್ನಾತ್ಮವನು ತೃಪ್ತಿ ಪಡಿಸುವದು । ಬಳಿಕ ಶೋಧಕೆ ಹೊರಡಬೇಕು ॥ 181

ಈ ಅರ್ಥದ್ದೊಂದು ಬಾಬಾರ ಕತೆ । ತೋರುವದೀ ನಿಜತತ್ವದ ಯಥಾರ್ಥತೆ ।
ಇಲ್ಲಿ ಅದರ ದ್ವಿರುಕ್ತಿ ಏಕೆ ಮತ್ತೆ । ಆ ಅಧ್ಯಾಯವೇ ಶ್ರೋತೃಗಳೆದುರಿಗಿರುವಾಗ ॥ 182

ಗುರು ಗರಿಮಾ ಎಂಬ ಒಂದು । ಹಿಂದಿನಧ್ಯಾಯದಲಿ ಕಥೆಯೊಂದು ।
ಅಲ್ಲಿ ಸ್ವಮುಖದಿಂದ ಭವಿಷ್ಯವಾಣಿ ಗುರುವಿನದು । ಕಾರುಣಿಕ ಶ್ರೀ ಸಾಯಿ ವರ್ಣಿಸಿರುವರು ॥ 183

ಅದೇ ಸತ್ಯ ಅನುಭವಕೆ ಬಂದುದ । ಯಾವಾಗ ಅಪ್ಪಾ ಹೊರಟರು ಊಟ ಮುಗಿಸಿಕೊಂಡು ।
ಚಿತ್ರೆ ಎಂಬ ಸ್ನೇಹಿತನನು ಜೊತೆಗೆ ಕರೆದುಕೊಂಡು । ಸಹಜ ತಿರುಗಾಡಲು ಹೊರಟರು ॥ 184

ಹೀಗೆ ಒಂದಿಷ್ಟು ಮುಂದೆ ಹೋಗಲು । ನೋಡಿದರು ಒಬ್ಬ ಗೃಹಸ್ಥ ।
ಬರುತಿದ್ದ ತಮ್ಮನ್ನೇ ಅನುಲಕ್ಷಿಸುತ । ಅತಿಸತ್ವರನಾಗಿ ಆ ಸ್ಥಳದಿ ॥ 185

ಬಂದು ನಿಂತುಕೊಂಡಾಗ ಹತ್ತಿರ । ಅಪ್ಪಾ ಸಾಹೇಬ ನಿಧಾನವಾಗಿ ಅವಲೋಕಿಸಿ ಅವರ ।
ಇವರೇ ಇರಬಹುದು ಬೆಳಗಿನ ಪ್ರಹರ । ಮನೆಗೆ ಬಂದಿರಬೇಕೆಂದೆನಿಸಿತು ॥ 186

ಮೊದಲು ಹುಡಿಕಿದ್ದೆ ಯಾರ । ಅವನೇ ಇರಬೇಕು ಈ ಫಕೀರ ।
ಒಂದಿಷ್ಟೂ ಬಿಡದೆ ಚಿತ್ರವ ಹೋಲುವ ಇವರ । ನೋಡಿ ವಿಸ್ಮಯವಾಯಿತು ॥ 187

ಹೀಗೆ ಅಪ್ಪಾ ವಿಚಾರ ಮಾಡುತಿದ್ದ । ಅಷ್ಟರಲಿ ಫಕೀರ ಮುಂದೆ ಕೈಯೊಡ್ಡಿದ್ದು ।
ಕೈಯಲಿ ಇಟ್ಟರು ರೂಪಾಯಿ ಒಂದ । ಅಪ್ಪಾ ಆ ಕಾಲದಲ್ಲಿ ॥ 188

ಮತ್ತೆ ಬೇಡಿದಾಗ ಮತ್ತೊಂದು । ಕೊಟ್ಟರು ಮೂರನೇಯದು ।
ಹಾಗೇ ಬೇಡಿದ ಇನ್ನೂ ಒಂದು । ಇದರ ಕೌತುತ ಮುಂದೆ ಇರುವದು ॥ 189

ಚಿತ್ರೆಯವರ ಹತ್ತಿರ ಇದ್ದವು ಮೂರು । ಅವುಗಳನ್ನು ಅಪ್ಪಾ ತೆಗೆದುಕೊಂಡರು ।
ಆಫಕೀರನಿಗೆ ಕೊಟ್ಟರು । ಆದರೂ ಅವ ಬೇಡುವುದು ಬಿಡುವಲ್ಲ ॥ 190

ಅಪ್ಪಾಸಾಹೇಬರು ಅವನಿಗೆ । ಮತ್ತೆ ಕೊಡುವೆನೆಂದರು ಬಂದರೆ ಮನೆಗೆ ।
ಆಗಲೆಂದು ಮನೆಯ ಕಡೆಗೆ । ಮೂವರು ಹೊರಟರು ॥ 191

ಮನೆಗೆ ಬಂದು ಮತ್ತೆ ಮೂರು । ರೂಪಾಯಿಗಳ ಅವನ ಕೈಯ್ಯಲಿಟ್ಟರು ।
ಒಟ್ಟು ಒಂಬತ್ತು ರೂಪಾಯಿಗಳಾದರೂ । ಫಕೀರನ ಸಮಾಧಾನವಾಗಲಿಲ್ಲ ॥ 192

ಕೇಳಿದಾಗ ಮತ್ತೂ ಹೆಚ್ಚಿಗೆ ದಕ್ಷಿಣೆಯನು । ಬಿಟ್ಟು ಹತ್ತರನೋಟೊಂದನು ।
ನನ್ನ ಹತ್ತಿರ ಉಳಿದಿಲ್ಲ ಏನೂ । ಎಂದು ಸ್ಪಷ್ಟವಾಗಿ ಹೇಳಿದರು ಅಪ್ಪಾ ॥ 193

ಮುಗಿದು ಹೋದವು ಬಿಚ್ಚು ರೂಪಾಯಿಗಳೆಲ್ಲ । ಇನ್ನು ಬೇರೆ ಏನು ಉಳಿದಿಲ್ಲ ।
ಫಕೀರನೆಂದ ಕೊಡಿರಿ ನೋಟನ್ನು । ಒಂಭತ್ತು ರೂಪಾಯಿಗಳ ತಿರುಗಿ ಕೊಟ್ಟ ॥ 194

ಕೈಯಲ್ಲಿ ಬಿದ್ದಾಗ ಹತ್ತರ ನೋಟ । ರೂಪಾಯಿಗಳ ತಿರುಗಿ ಕೊಟ್ಟು ಬಿಟ್ಟ ।
ಬಳಿಕ ಫಕೀರ ಬಂದ ದಾರಿಗೆ ಹೊರಟ । ಅತಿ ವೇಗದಿಂದ ಹಿಂದಿರುಗಿ ॥ 195

ನೋಡಿದಾಗ ಈ ಕಥೆಯ ಸಾರ । ಯಾವ ಭಕ್ತನದು ಹೇಗೆ ಉದ್ಧಾರ ।
ಹಾಗೇಯೆ ಪೂರ್ಣ ಮಾಡಿಸಿಕೊಳ್ಳುವರೆಂದವರ । ಬಿರುದೇ ಇತ್ತು ಸಾಯಿಯವರದು ॥ 196

ಶ್ರೋತೃಗಳ ಶ್ರವಣೋತ್ಸಕತೆಯನು ನೋಡಲಾಗಿ । ನೆನಪಾಯಿತು ಪ್ರಸಂಗೋಪಾತ್ತವಾಗಿ ।
ಕೇಳಿರಿ ಅತಿ ಸಾದರರಾಗಿ । ಇದೇ ಅರ್ಥದ ಇನ್ನೊಂದು ಕಥೆಯನು ॥ 197

ಇರುವನೊಬ್ಬ ಭಕ್ತಭಾವಿಕ । ಹೆಸರವದು ಹರಿಭಾವೂ ಕರ್ಣಿಕ ।
ಡಹಾಣೂ ಊರಿನ ಸ್ಥಾಯಿಕ । ಸಾಯಿಯ ಅನನ್ಯ ಭಕ್ತರು ॥ 198

ಸನ ಹತ್ತೊಂಬತ್ತು ನೂರಾಹದಿನೇಳರಲ್ಲಿ । ಪವಿತ್ರ ಗುರು ಪೌರ್ಣಿಮೆಯ ಸಮಯದಲ್ಲಿ
ಯಾತ್ರೆಗೆಂದು ಬಂದರು ಶಿರಡಿಯಲಿ । ಆ ಅಲ್ಪ ಚರಿತೆಯ ಹೇಳುವೆ ॥ 199

ಯಥಾವಿಧಿ ಪೂಜೆ ಮುಗಿಯಿತು । ದಕ್ಷಿಣೆ ವಸ್ತ್ರಗಳನರ್ಪಿಸಲಾಯಿತು ।
ಆಜ್ಞೆಯ ಪಡೆದು ಕೆಳಗಿಳಿದಾಗ ಬಂತು । ವಿಚಾರವೊಂದು ಮನದಲಿ ॥ 200

ಮತ್ತೆ ಎನಿಸಿತು ಹೋಗಿ ಮೇಲೆ । ಇನ್ನೊಂದು ರೂಪಾಯಿ ಕೊಡಬೇಕು ಬಾಬಾರ ಕೈಯ್ಯಲ್ಲೇ ।
ಆದರಾ ವಿಚಾರ ಉಳಿಯಿತು ಅಲ್ಲೇ । ರೂಪಾಯಿ ಹಾಗೇ ಉಳಿಯಿತು ॥ 201

ಯಾವ ಗ್ರಹಸ್ಥನು ಆಜ್ಞೆ ಕೊಡಿಸಿದ । ಅವನೇ ಕೈಸನ್ನೆ ಮಾಡಿ ಹೇಳಿದ ।
ಈಗೊಮ್ಮೆ ಆಜ್ಞೆಯಾಗಿದ್ದು । ಮುಂದಿನ ಮಾರ್ಗವ ಹಿಡಿಯಿರಿ ಎಂದು ॥ 202

ಆ ಸಂಕೇತವನು ನಂಬಿ ಕರ್ಣಿಕರು । ಹಾಗೇ ಮುಂದೆ ನಡೆದರು ।
ಮಿತ್ರನೊಡನೆ ಮಾರ್ಗದಲ್ಲಿವರು । ನಾಸಿಕದಲ್ಲಿ ಇಳಿದರು ॥ 203

ಕಾಳಾರಾಮನ ಮಂದಿರಕೆ । ಕರ್ಣಿಕರು ಹೋದರು ದರ್ಶನಕೆ ।
ಅಲ್ಲಿ ನರಸಿಂಹ ಮಹಾರಾಜರೆಂಬ ಸಂತರವರಿಗೆ । ಸಹಜದಲೇ ದರ್ಶನವಾಯಿತು ॥ 204

ಅವರ ಸುತ್ತಲೂ ಭಕ್ತರಿದ್ದರು । ಮಹಾರಾಜರು ಅಕಸ್ಮಾತ್ತಾಗಿ ಎದ್ದರು ।
ಕರ್ಣಿಕರ ಕೈಹಿಡಿದು ಕೇಳಿದರು । ನನ್ನ ರೂಪಾಯಿ ಕೊಡು ಎಂದು ॥ 205

ಕರ್ಣಿಕ ಮನದಲಿ ವಿಸ್ಮಯಗೊಂಡ । ರೂಪಾಯಿನಿತ್ತ ಆನಂದದಿಂದ ।
ಹೇಗೆ ಈ ಸಾಯಿ ನಾಮನದಲೆಂದ । ರೂಪಾಯಿ ಸ್ವೀಕರಿಸಿದರು ಎನಿಸಿ ॥ 206

ಸಾಯಿ ಸ್ವೀಕರಿಸಿದರೆಂಬದೂ ಸರಿಯಲ್ಲ । ಮನದಲೇನೂ ಆಗ ವಿಚಾರವಿರಲಿಲ್ಲ ।
ಬಲವಂತವಾಗಿ ಎಳೆದು ಕೇಳಿದರಲ್ಲ । ಅವರ ಹಾಗೆಯೇ ಇವರೂ ॥ 207

ಸಂಕಲ್ಪ ವಿಕಲ್ಪಾತ್ಮಕ ಮನವಿದು । ತರಂಗದ ಮೇಲೆ ತರಂಗವೇಳುವದು ।
ಸಕೃದ್ದರ್ಶನದಲೆನಿಸುವದು ಒಂದು । ಪ್ರಸಂಗದಲಿ ಬೇರೆ ಕಲ್ಪನೆ ॥ 208

ಮೊದಲು ಮನದಲೆದ್ದ ವಿಚಾರ । ಅದು ಸದ್ವೃತ್ತಿಯದೇ ಇದ್ದರೆ ಮಾತ್ರ ।
ಪರಿಪೋಷಣೆ ಆದರೆ ಅದರ । ಕಲ್ಯಾಣಕರವಾಗಿರುವದದು ॥ 209

ಅದರದೇ ಅನುಸಂಧಾನ । ದೃಢಾಭ್ಯಾಸ ನಿದಿಧ್ಯಾಸನ ।
ಆಗಗೊಡಬಾರದದರ ವಿಸ್ಮರಣ । ಪ್ರಯತ್ನದಿಂದುಳಿಸಿಕೊಳಬೇಕು ವಚನ ॥ 210

ಅಪ್ಪಾ ಸಾಹೇಬರು ಮಾತನಾಡಿದರು । ಮುಂದೆ ಮರೆಯಬಹುದಾಗಿತ್ತು ಆದರೂ ।
ಮಾತು ಬಂದಾಗಲೇ ಮುಗಿಸಿಕೊಂಡರು । ಭಕ್ತಿಯ ವೈಚಿತ್ರ್ಯ ತೋರಿದರು ॥ 211

ಅಲ್ಲದಿದ್ದಲ್ಲಿ ಆ ಫಕೀರನಿಗೆ । ನೋಟನ್ನು ಸೇರಿಸಿ ಹತ್ತೊಂಬತ್ತು ಇತ್ತಿದ್ದಾಗ್ಯೆ ।
ಒಂಭತ್ತೇ ಹಿಂದಿರುಗಿಸಿದ ಅಪ್ಪಾಗೆ । ಅವನಿಗೆ ಹತ್ತೇ ಬೇಕಾಗಿತ್ತೆಂದು ॥ 212

ಬಾಬಾರ ಕರಸ್ಪರ್ಷವಾದದ್ದು । ಆ ಒಂಭತ್ತು ಪುತ್ಥಳಿಗಳ ಸರವಿದು ।
ನವವಿಧಾಭಕ್ತಿ ಪ್ರೇಮಗಳ ಸಮೂಹವಿದು । ಸ್ಮರಣಪ್ರಕಾರವಿದು ಬಾಬಾರದು ॥213

ದೇಹ ವಿಸರ್ಜನದ ಕಥೆ ಕೇಳಲು । ಸ್ವಯಂ ಬಾಬಾರೇ ದೇಹವಿಡಲು ।
ನವದಾನವನಾಗ ಕೊಟ್ಟಿರಲು । ಕಾರಣ ತಿಳಿದು ಬರುವದು ಅಭಿನವತೆ ॥ 214

ಕಾಯಾವಾಚಾಮನದಿಂದ ಕೊಟ್ಟದ್ದು । ಅವರ ಪತ್ನಿ ರೂಪಾಯಿಯೊಂದು ।
ಅತಿ ಸಂತುಷ್ಟರಾಗಿ ಸ್ವೀಕರಿಸಿದ್ದು । ಆಗ ಹೆಚ್ಚಿಗೆ ಕೇಳುವದಿರಲಿಲ್ಲ ॥ 215

ಆದರೆ ತನ್ನ ಪತ್ನಿ ಕೊಟ್ಟದ್ದು । ಅಪ್ಪಾರ ಮನಸಿಗೆ ಅಲ್ಪವೆನಿಸಿದ್ದು ।
ನಾನಿದ್ದರೆ ಅದರ ಹತ್ತರಷ್ಟು ಕೊಡುತಿದ್ದುದು । ಆ ಫಕೀರನಿಗೆ ತಿಳಿದಿತ್ತು ಆಗಲೇ ॥ 216

ಹೀಗೆ ಅಪ್ಪಾ ಆಗಿದ್ದರು ವಚನಬದ್ಧ । ಹತ್ತು ರೂಪಾಯಿಗಳ ಕೊಡುತಿದ್ದೆನೆಂದ ।
ಅದು ಸಂಪೂರ್ಣಕೊಡದೆ ನಿರ್ಮುಕ್ತನಾಗುವದು ವಚನದಿಂದ । ಋಣಮುಕ್ತ ಹೇಗೆ ಆದಾನು ॥ 217

ಇತರರಂತಹ ಫಕೀರನವನೇ । ಅವನೇನು ಯಾರೋ ಭಿಕ್ಷುಕನೇ ।
ಕೈಮೇಲೆ ಬಿದ್ದರೆ ಸಾಕು ಏನೇ । ತಿರುಗಿ ಹೋಗಿ ಬಿಡುವನೆನಲು ॥ 218

ಅದಕಿನ್ನೂ ದಿನಗಳು ಕಳೆದಿರಲಿಲ್ಲ । ಮಾತಾಡಿದ ದಿನವೇ ಬಂದುಬಿಟ್ಟನಲ್ಲ ।
ಆದರೂ ಸಾಶಂಕಿತವಾಯಿತು ಅಪ್ಪಾರ ಮನಸ್ಸೆಲ್ಲ । ಆದರೂ ಅವನಾರೋ ಅಪರಿಚಿತ ಫಕೀರನಿರಬೇಕೆಂದು ॥ 219

ಬೇಡತೊಡಗಿದಾಗವನು ಆರಂಭದಲಿ । ಆರು ರೂಪಾಯಿಗಳಿದ್ದವವರ ಬಳಿ ।
ಆದರಾದುಡ್ಡೆಲ್ಲ ಹಾಕಿದನವರ ಕೈಯಲ್ಲಿ । ಅವರಿಗಾಗಿಯೇ ಅಲ್ಲವೇ ॥ 220

ಅಪ್ಪಾನ ಮೇಲೆ ಪ್ರೇಮವಿರದಿದ್ದರೆ । ಫಕೀರನ ವೇಷದಿಂದ ಬಾಬಾ ಬರುತಿದ್ದರೇ ।
ದಕ್ಷಿಣೆ ಕೇಳುವ ನೆಪ ಮಾಡದಿದ್ದರೆ । ಈ ಕಥೆಗೆ ರಂಗೇರುತ್ತಿತ್ತೇ ॥ 221

ಹೆಸರಿಗೆ ಮಾತ್ರ ಅಪ್ಪಾ ಸಾಹೇಬನದು । ಒಂದೇ ಗತಿ ನಮ್ಮ ನಿಮ್ಮದು ।
ಇದ್ದರೂ ಮೊದಲು ಉದ್ದೇಶ ಒಳ್ಳೆಯಧು । ಅದು ಉಳಿಯದು ಅಪರಿಚಿತ ಪ್ರಸಂಗಕೆ ॥ 222

ವಾಗ್ದಾನ ಮಾಡುವದರಲಿ ನಾವೆಲ್ಲ ಮುಂದು । ದಾನ ಕೊಡುವಾಗ ಬಲು ಶಂಕಿಸುವರು ।
ಜೀವ ಕೆಳಗೆ ಮೇಲೆ ಆಗುವದು । ನಿಶ್ಚಿತತೆಯಂತೂ ದುರ್ಲಭ ॥ 223

ಆದರೆ ಹಿತಮಿತವಾಗಿ ಮಾತಾಡುವವ । ಆಡಿದಂತೆ ನಡೆಯುವವ ।
ನುಡಿದದ್ದನ್ನು ನಿಜ ಮಾಡಿ ತೋರಿಸುವ । ಹರಿಯ ಪ್ರಿಯನವ ಎಲ್ಲೋ ಒಬ್ಬ ॥224

ಅನನ್ಯ ಭಾವಿಕ ಭಕ್ತನು । ಯಾರು ಏನೇ ಬೇಡಲು ಅದನು ।
ಐಹಿಕವಿರಲಿ ಅಥವಾ ಆಮುಷ್ಮಿಕವನು । ಸಾಯಿ ಸಮರ್ಥ ಫಲದಾಯಕನು ॥ 225

ಅಪ್ಪಾ ಸಾಹೇಬರು ಜಾಣರಿದ್ದರೂ । ಆಂಗ್ಲ ವಿದ್ಯಾವಿಭೂಷಿತರು ।
ಆಂಭದಲಿ ಅವರಗೆ ಸರಕಾರದವರು । ನಲ್ವತ್ತು ರೂಪಾಯಿ ಮಾತ್ರ ವೇತನ ಕೊಡುತಿದ್ದರು ॥ 226

ಮುಂದೆ ಈ ಭಾವಚಿತ್ರ ದೊರೆತ ಮೇಲೆ । ಸಾವಕಾಶವಾಗಿ ಹೋಯಿತು ಬೆಳೆಯುತ್ತಲೇ ।
ನಲ್ವತ್ತರ ಕೆಲಪಟ್ಟು ಮೇಲೇ । ವೇತನವೀಗ ಬರತೊಡಗಿತ್ತು ।॥ 227

ಕೊಡಲು ಒಂದಕ್ಕೆ ಹತ್ತರಷ್ಟು । ಅಧಿಕಾರ ಸತ್ತೆಗಳೂ ಬೆಳೆದವು ಹತ್ತು ಪಟ್ಟು ।
ನೋಡನೋಡುವದರೊಳಗೆ ಈ ಅನುಭವ ಬಂತು । ಎಲ್ಲರ ಎದುರಿಗೇ ಬಾಬಾರದು ॥ 228

ಪರಮಾರ್ಥದ ದೃಷ್ಟಿಯೂ ಅದರ ಹೊರತಾಗಿ । ಬೆಳೆಯತೊಡಗಿತು ನಿಷ್ಠೆಯಿಂದಾಗಿ ।
ಇದೇನು ಕಾಣಿಸುವದೇ ಸಾಮಾನ್ಯವಾಗಿ । ವಿಚಿತ್ರ ಬಾಬಾರ ಕೈಚಳಕ ॥ 229

ಆಮೇಲೆ ಅಪ್ಪಾಸಾಹೇಬರು । ಫಕೀರನಿತ್ತ ವಿಭೂತಿಯ ಬೇಡಿದರು ।
ನೋಡಿದರೆ ಅದರ ಚೀಟು ಕಟ್ಟಿದ್ದರು । ಪ್ರೀತಿಯಲಿ ಬಿಚ್ಚಿ ನೋಡಿದರು ॥ 230

ಹೂವು ಅಕ್ಷತೆಗಳು ಉದಿಯ ಜೊತೆಗೆ । ಇದ್ದವು ಆ ಚೀಟಿನೊಳಗೆ ।
ತಾಯೀತ ಮಾಡಿ ಅದ ತಮ್ಮ ಕೈಗೆ । ಅತಿ ಪೂಜ್ಯ ಭಾವನೆಯಿಂದ ಕಟ್ಟಿಕೊಂಡರು ॥ 231

ಮುಂದೆ ಬಾಬಾರ ದರ್ಶನ ತೆಗೆದುಕೊಂಡರು । ಆಗ ಬಾಬಾ ಸ್ವತಃ ಕೊಟ್ಟಿದ್ದರು ।
ಭಕ್ತಿಪೂರ್ವಕವಾಗಿ ಆ ಕೂದಲನ್ನಾದರೂ । ಆ ತಾಯೀತದಲ್ಲಿ ಹಾಕಿಸಿದರು ॥ 232

ಎಷ್ಟೆಂದು ಹೇಳಲಿ ಬಾಬಾರ ಉದಿಯ ಮಹಿಮಾನ । ಉದೀ ಶಂಕರನಿಗೂ ಭೂಷಣ ।
ಭಾವನೆಯಿಟ್ಟು ಮಾಡಲು ಚರ್ಚನ । ವಿಘ್ನನಿರಸನ ತತ್ಕಾಲದಲ್ಲಿ ॥ 233

ಮುಗಿಸಿ ಮುಖಮಾರ್ಜನ ಸ್ನಾನಾದಿ । ನಿತ್ಯವೂ ಹಚ್ಚಿಕೊಳ್ಳಲು ಉದಿ ।
ಚರಣ ತೀರ್ಥದ ಜೊತೆ ಪಾನದಿ । ತೆಗೆದುಕೊಂಡವ ಪಾವನನಾಗುವ ॥ 234

ಅಲ್ಲದೇ ಈ ಉದಿಯ ವಿಶೇಷ । ಸೇವಿಸಿದವನಾಗುವ ಪೂರ್ಣಾಯುಷ ।
ಪಾತಕನಿರಸನವಾಗುವದು ಅಶೇಷ । ಸುಖಸಂತೋಷ ಯಾವಾಗಲೂ ॥ 235

ಪಾರಣೆಯ ಈ ಮಧುರ ಕಥಾಮೃತದ । ಸಾಯಿ ಅಪ್ಪಾನ ಸಲುವಾಗಿ ಮಾಡಿಸಿದ ।
ನಾವು ಆಗಂತುಕರು ಅತಿಥಿಯಾಗಿ ಬಂದ । ಪಂಕ್ತಿಗೆ ಕುಳಿತೆವು ಯಥೇಷ್ಟವಾಗಿ ॥236

ಅತಿಥಿಗೆ ಅಥವಾ ಒಡೆಯನಿಗೆ । ಒಂದೇ ಮೇಜವಾನಿ ಇಬ್ಬರಿಗೆ ।
ಭೇದವಿಲ್ಲ ರಸಸ್ವಾದನೆಯೊಳಗೆ । ಸ್ವಾನಂದ ಭೋಜನದಿಂದ ತೃಪ್ತರಾಗಿರಿ ॥ 237

ಹೇಮಾಡ ಸಾಯಿ ಚರಣದಲಿ ಶರಣ । ಸಾಕಿನ್ನೀಗ ಇಷ್ಟೇ ಶ್ರವಣ ।
ಮುಂದಿನಧ್ಯಾಯದಲಿ ಮಾಡುವೆನು ಕಥನ । ಹೆಚ್ಚಿನ ಮಹಿಮಾನ ಉದಿಯದು ॥ 238

ಉದೀ ಚರ್ಚನ ಸಾಯಿ ದರ್ಶನ । ಎಲುಬಿನ ವ್ರಣದ ಸಮೂಲ ನಿರಸನ ।
ನಾರೂ ನಿವಾರಣ ಗ್ರಂಥಿಜ್ವರ ಹರಣ । ಅವಧಾನಪೂರ್ಣರಾಗಿ ಕೇಳಿರಿ ॥ 239

ಭಕ್ತ ಹೇಮಾಡಪಂತ ವಿರಚಿತೆ । ಯಥಾಮತಿ ಲಲಿತಾನುವಾದಿತೆ ।
ಶ್ರೀ ಸಾಯಿ ಸಮರ್ಥ ಸಚ್ಚರಿತೆ । ಉದೀ ಪ್ರಭಾವೋನಾಮ
ತ್ರಯಸ್ತ್ರಿಂಸತ್ತಮೋಧ್ಯಾಯಃ ಸಂಪೂರ್ಣಃ ॥

॥ ಶ್ರೀ ಸದುಗರು ಸಾಯಿನಾಥಾರ್ಪಣಮಸ್ತು ॥

॥ ಶುಭಂ ಭವತು ॥